# ಬೃಹಚ್ಚರಣ

ಸಂಘದ ತ್ರೈಮಾಸಿಕ ವಾರ್ತಾ ಪತ್ರಿಕೆ


**ಸಂಘದ ಸದಸ್ಯರಾಗಿ**

| | |
|---|---|
| ಮಹಾ ಪೋಷಕರು | – ₹ 25,000/– |
| ಪೋಷಕರು | – ₹ 5,000/– |
| ಸದಸ್ಯತ್ವ | – ₹ 1,000/– |
| ವಾರ್ಷಿಕ ನಿರ್ವಹಣೆ | – ₹ 500/– |


ಸಂಪುಟ : 9 ಸಂಚಿಕೆ : 3 ಖಾಸಗಿ ಪ್ರಸಾರಕ್ಕಾಗಿ ಜುಲೈ–ಸೆಪ್ಟೆಂಬರ್ 2019


## ಅಧ್ಯಕ್ಷರ ನುಡಿ

ಬೃಹಚ್ಚರಣ ಸಂಘದ ಮಾನ್ಯ ಸದಸ್ಯರೆಲ್ಲರಿಗೂ ಗೌರವಾದರಪೂರ್ವಕ ನಮಸ್ಕಾರಗಳು. ಬರಲಿರುವ ಹಬ್ಬಗಳು ಎಲ್ಲರಿಗೂ ಮಂಗಳವನ್ನುಂಟು ಮಾಡಲೆಂದು ಹಾರೈಸುತ್ತೇನೆ.


ನಾನು ಈಗ ಎರಡು ತಿಂಗಳಿನಿಂದ ಪರಸ್ಥಳದಲ್ಲಿದ್ದರೂ ನನ್ನ ಅನುಪಸ್ಥಿತಿಯಲ್ಲಿ ಸಂಘದ ಚಟುವಟಿಕೆಗಳನ್ನು ಸರಾಗವಾಗಿ ನಡೆಸಿಕೊಂಡು ಹೋಗುತ್ತಿರುವುದಕ್ಕಾಗಿ ಕಾರ್ಯಕಾರಿ ಸಮಿತಿಗೆ ಧನ್ಯವಾದಗಳು. ಮುಂದಿನ ತಿಂಗಳು ವಾಪಸಾಗುತ್ತೇನೆ.

ನಮ್ಮ ಸಮುದಾಯದವರು ನಮ್ಮನ್ನು ಅಗಲಿದಾಗ "ಬೃಹಚ್ಚರಣ" ಸಂಚಿಕೆಗಳಲ್ಲಿ ನಮಗೆ ತಿಳಿದ ಮಟ್ಟಿಗಿನ ವಿವರಗಳನ್ನು ಈಗಾಗಲೇ ನೀಡುತ್ತಿದ್ದೇವೆ. ಹಿರಿಯ ಸದಸ್ಯ ಶ್ರೀ ವಿ.ಎಸ್. ಮಣಿಯವರ ಸಲಹೆಯಂತೆ ಇನ್ನು ಮುಂದೆ ನಮ್ಮನ್ನಗಲಿದವರ ವಿವರಗಳ ಜೊತೆಗೆ ಅವರ ಭಾವಚಿತ್ರವನ್ನು ಕುಟುಂಬ ಸದಸ್ಯರು ಕಳುಹಿಸಿದಲ್ಲಿ ಪ್ರಕಟಿಸುವವರಿದ್ದೇವೆ.

ಸಂಘದ ಚಟುವಟಿಕೆಗಳಿಗೆ ದೇಣಿಗೆ ನೀಡುತ್ತಿರುವ ಪ್ರತಿಯೊಬ್ಬರಿಗೂ ಧನ್ಯವಾದಗಳು.

ವಾರ್ಷಿಕ ನಿರ್ವಹಣಾ ವೆಚ್ಚ ನೀಡಲು ಪ್ರತಿಯೊಬ್ಬರಿಗೂ ವಿನಂತಿ.

ಎಲ್ಲರಿಗೂ ಒಳ್ಳೆಯದಾಗಲಿ.



**ಬಿ. ಸುಬ್ರಹ್ಮಣ್ಯಂ**
ಅಧ್ಯಕ್ಷರು

## ಸಂಪಾದಕೀಯ

ಮಾನ್ಯರೇ ನಮಸ್ಕಾರ,

ಮುಂಬರುವ ಹಬ್ಬಗಳಿಗೆ ತಮಗೆಲ್ಲಾ ಶುಭಕೋರುತ್ತೇನೆ. ತಮ್ಮೆಲ್ಲರ ಅಭಿಮಾನಗಳಿಸಿರುವ 'ಬೃಹಚ್ಚರಣ' ಪತ್ರಿಕೆಯು ಸತತವಾಗಿ ಎಂಟು ವರ್ಷಗಳಲ್ಲಿ 32 ಸಂಚಿಕೆಗಳನ್ನು ಹೊರತಂದಿರುವುದಕ್ಕೆ ಮುಖ್ಯಕಾರಣ ಶ್ರೀಯುತರಾದ ಎಸ್. ಸೋಮಸುಂದರ, ವಿ.ಎಸ್. ಮಣಿ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು. ನನ್ನೊಂದಿಗೆ ಪೂರ್ಣ ಸಹಕಾರ ನೀಡುತ್ತಿರುವ ಸಂಪಾದಕರ ಮಂಡಳಿ ಅವರುಗಳಿಗೆ ನಾನು ಚಿರಋಣಿ.

ನಮ್ಮ ಸಮುದಾಯದವರು ಎಲ್ಲಾ ರಂಗದಲ್ಲೂ ಕಾರ್ಯನಿರ್ವಹಿಸುತ್ತಿದ್ದು, ಅವರ ಅನುಭವಗಳನ್ನು ಇತರರೊಂದಿಗೆ ಹಂಚಿಕೊಳ್ಳುವ ಸಲುವಾಗಿ 'ವೃತ್ತಿ–ತೃಪ್ತಿ' ಎಂಬ ಹೊಸ ಶೀರ್ಷಿಕೆ ತರಲಿದೆ. ಒಂದು ಪುಟ ಮೀರದಂತೆ ತಮ್ಮ ಲೇಖನಗಳನ್ನು ಛಾಯಾಚಿತ್ರದೊಂದಿಗೆ ಕಳುಹಿಸಲು ಕೋರಿಕೆ.

ಪತ್ರಿಕೆಯಲ್ಲಿ ತಪ್ಪಾಗಿ ಅಚ್ಚಾಗಿರುವ ಕೆಲವು ಪ್ರಮಾದಗಳಿಗೆ ವಿಷಾದವಿದ್ದು, ನನ್ನ ಗಮನಕ್ಕೆ ತಂದವರಿಗೆ ಧನ್ಯವಾದ.




**ಕೆ.ಸಿ. ನಟರಾಜ್**
ಸಂಪಾದಕ

**9845113475**


**ಬೃಹಚ್ಚರಣ ಪತ್ರಿಕೆಗೆ, ಲೇಖನ–ಛಾಯಾಚಿತ್ರ ಕಳುಹಿಸುವವರಿಗೆ**

**ಈ–ಮೇಲ್ ವಿಳಾಸ : mmdbs.mag@gmail.com**

**ಸ್ನೇಹ ಸಂಜೆಯ ಸಂತೋಷಕೂಟದಲ್ಲಿ ಸಂಘದ ಹಿತೈಷಿಗಳು (17–08–2019)**



# ವಾರ್ತಾ ಚಿತ್ರಗಳು



ವೈದಿಕ ಧರ್ಮ ಸಹಾಯ ಸಂಘದಿಂದ ನಮ್ಮ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಯುತರಾದ ಎಸ್.ಸಿ. ಶ್ರೀನಿವಾಸ ಹಾಗೂ ಅರುಣ್‌ರವರಿಗೆ ಗೌರವ ಸಮರ್ಪಣೆ (21–7–2019)



ಸಂಘದ ಹಿರಿಯ ಸದಸ್ಯ ಶ್ರೀ ವಿ.ಎಸ್. ಮಣಿರವರು ಕಾರ್ಯದರ್ಶಿಯಾಗಿ ನೀಡಿದ ಸೇವೆಯನ್ನು ಸ್ಮರಿಸಿ ಗೌರವಿಸಿದ ಸಂದರ್ಭ (17–8–2019)



'ಸಮತ್ವ ಪ್ರತಿಷ್ಠಾನ'ದ ಉದ್ಘಾಟನೆ ನೇರವೇರಿಸಿದ ಇಸ್ರೋ ವಿಜ್ಞಾನಿ ಡಾ॥ ರಾಧಾಕೃಷ್ಣನ್ (25–8–2019)



ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಕುಮಾರಿ ಅಚಲಾ ಸ್ಮರಣಾರ್ಥ ದತ್ತಿ ಕಾರ್ಯಕ್ರಮದ ಉದ್ಘಾಟನಾ ಸಮಾರಂಭ (19–9–2019)



ಸಂಘದ ಸದಸ್ಯ, ಶ್ರೀ ಎನ್. ಶಿವಕುಮಾರ್‌ರವರ 'ವನ್ಯಜೀವಿ ಛಾಯಾಚಿತ್ರ' ಪ್ರದರ್ಶನವನ್ನು ಸಮುದಾಯದ ಹಿರಿಯರಾದ ಶ್ರೀ ಎಸ್. ಶಿವರಾಂರವರು ಉದ್ಘಾಟಿಸಿದ ಸಂದರ್ಭದ ಚಿತ್ರ (28–7–2019)



ಕಿತ್ತಿಗಾನಹಳ್ಳಿ ನಾಗೇಶ್ವರ ಕ್ಷೇತ್ರದಲ್ಲಿ ಸಾಮೂಹಿಕ ಉಪಾಕರ್ಮದಲ್ಲಿ ಭಾಗವಹಿಸಿದ ನಮ್ಮ ಸಮುದಾಯದವರು (15–8–2019)

## ಮೈ.ಮಂ.ದ್ರಾ. ಬೃಹಚ್ಚರಣ ಸಂಘ

(ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಂಗ ಸಂಸ್ಥೆ)

**ಕಾರ್ಯಕಾರಿ ಸಮಿತಿ**

**ಶ್ರೀಯುತರುಗಳಾದ**

**ಬಿ. ಸುಬ್ರಹ್ಮಣ್ಯಂ, 9449869667**
ಅಧ್ಯಕ್ಷರು

**ಎಚ್.ಕೆ. ಶಶಿಧರ್, 9845173766**
ಉಪಾಧ್ಯಕ್ಷರು

**ಎಸ್.ಸಿ. ಶ್ರೀನಿವಾಸ, 9845376947**
ಕಾರ್ಯದರ್ಶಿ

**ಅರುಣ್ ವಿ., 9880166001**
ಸಹಕಾರ್ಯದರ್ಶಿಗಳು

**ಎಸ್. ಸತ್ಯನಾರಾಯಣ, 9980945699**
ಖಜಾಂಚಿ

**ಟಿ.ಪಿ. ಸೂರ್ಯನಾರಾಯಣ, 9945484268**
ಸಹ ಖಜಾಂಚಿ

**ಸದಸ್ಯರು**

**ಎಸ್. ಸೋಮಸುಂದರ, 9900113298**
**ಕೆ.ಜಿ. ವೆಂಕಟೇಶ್, 9964012687**
**ಮಂಜುನಾರಾಯಣ್ ಕೆ. 9886114279**
**ಕೆ. ಗುಂಡಪ್ಪ, 9845332315**
**ಕೆ.ಬಿ.ಎಸ್. ಶರ್ಮ, 94820 87344**
**ಟಿ.ಎಸ್. ರಮೇಶನ್, 9663874531**
**ಸರಸ್ವತಿ ನಟರಾಜನ್, 9480619730**
**ಆರ್. ಗಣೇಶ್ ಶ್ರೀಧರ್, 9880187686**
**ಟಿ. ನಾಗೇಶ್, 9980662118**
**ಶಂಕರಪ್ರಸಾದ್ ಬಿ.ಆರ್., 9845663833**
**ಟಿ.ಎನ್. ರವಿಕಿರಣ್, 9972677005**
**ಅರುಣ್ ಸೇತುರಾಮ್, 9900313929**
**ನಿತಿನ್‌ಭಾಸ್ಕರ್, 9844417333**
ಲೆಕ್ಕಪರಿಶೋಧಕರು
**ಬಿ.ಎನ್.ಜಿ. ಪ್ರಸಾದ್, 9845128229**

**ಗೌರವ ಸಂಪಾದಕ ಮಂಡಳಿ-ಬೃಹಚ್ಚರಣ ಪತ್ರಿಕೆ**

**ಸಂಘದ ಅಧ್ಯಕ್ಷರು, ಕಾರ್ಯದರ್ಶಿ**

**ಎಸ್. ಸೋಮಸುಂದರ, 9900113298**

**ಕೆ.ಸಿ. ನಟರಾಜ್, 9845113475**
ಸಂಪಾದಕರು

**ಲಲಿತಾ ರಮೇಶ್, 9945199637**
ಉಪಸಂಪಾದಕಿ

**ಶಿವಕುಮಾರ್ ಎನ್., 6362337254**
ಛಾಯಾಗ್ರಾಹಕ

ಆತ್ಮೀಯರೇ,

ಬೃಹಚ್ಚರಣ ಸಮುದಾಯದ ಸದಸ್ಯರಿಗೆಲ್ಲಾ ನಮಸ್ಕಾರಗಳು.

ಸಂಘವು ಮುಂಬರುವ ದಸರಾ, ದೀಪಾವಳಿ ಹಬ್ಬಕ್ಕೆ ಶುಭಾಶಯಗಳನ್ನು ಕೋರುತ್ತದೆ. ಕಾರ್ಯಕಾರಿ ಸಮಿತಿ ಸದಸ್ಯರ ಅಭಿಪ್ರಾಯದಂತೆ ಸಂಘಕ್ಕೆ ಸದಸ್ಯರ ನೋಂದಣಿ ಪ್ರಕ್ರಿಯೆ ಹಮ್ಮಿಕೊಳ್ಳಲು ನಿರ್ಧರಿಸಲಾಗಿದ್ದು, ತಮ್ಮೆಲ್ಲರ ಪೂರ್ಣ ಸಹಕಾರ ನೀಡಲು ಮನವಿ ಮಾಡಿಕೊಳ್ಳುತ್ತೇನೆ.

ಆಧುನಿಕತೆಯತ್ತ ಸಂಘವು ಮುನ್ನಡೆಯಲು ಯೋಚಿಸಿದ್ದು, ಇದಕ್ಕಾಗಿ ಆಡಳಿತ, ಹಣಕಾಸು ನಿರ್ವಹಣೆ, ಸದಸ್ಯರ ನೋಂದಣಿ ಮುಂತಾದವುಗಳನ್ನು ಗಣಕೀಕರಿಸಲು ನಿರ್ಧರಿಸಲಾಗಿದೆ.

ಸಹಕಾರ್ಯದರ್ಶಿ ಶ್ರೀ ಅರುಣ್‌ರವರ ಸಲಹೆಯಂತೆ ವೈದ್ಯಕೀಯ ತಪಾಸಣಾ ಶಿಬಿರವೊಂದನ್ನು ಇಷ್ಟರಲ್ಲೇ ನಮ್ಮ ಸಮುದಾಯದ ಕುಟುಂಬ ಸದಸ್ಯರಿಗೆ ಆಯೋಜಿಸುವ ಯೋಜನೆ ಇದೆ.

ನವೆಂಬರ್ 10 ಅಥವಾ 17ನೇ ತಾರೀಖಿನಂದು ಒಂದು ದಿನದ ಪ್ರವಾಸವನ್ನು ಅಯೋಜಿಸಲಾಗಿದ್ದು ಪ್ರವಾಸದ ವೆಚ್ಚ ಮತ್ತು ಸ್ಥಳವನ್ನು ನಂತರದ ದಿನಗಳಲ್ಲಿ ತಿಳಿಸಲಾಗುವುದು.

ಡಿಸೆಂಬರ್ 29ರಂದು ಕಿತ್ತಿಗಾನಹಳ್ಳಿ ನಾಗೇಶ್ವರ ಕ್ಷೇತ್ರದಲ್ಲಿ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವವನ್ನು ಆಯೋಜಿಸಲಾಗಿದೆ. ಸಮುದಾಯದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಭಗವಂತನ ಕೃಪೆಗೆ ಪಾತ್ರರಾಗಬೇಕೆಂದು ಕೋರಿಕೆ.

ನಮ್ಮ ಕುಟುಂಬದವರೆಲ್ಲಾ ಒಂದಲ್ಲಾ ಒಂದು ರೀತಿ ನಮ್ಮ ಸಮುದಾಯದ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕೆಂದು ನಮ್ಮ ಇಚ್ಛೆ.

ಪ್ರತಿಯೊಬ್ಬರಿಗೂ ಅವರವರ ವೃತ್ತಿಯಲ್ಲಿ ತೃಪ್ತಿ ಸಿಕ್ಕಿರುತ್ತದೆ. ಇಲ್ಲದಿದ್ದರೆ ತೃಪ್ತಿ ತಂದುಕೊಳ್ಳುತ್ತಾರೆ. **"ವೃತ್ತಿಯಲ್ಲಿ-ತೃಪ್ತಿ"** ಎಂಬ ಹೊಸ ಅಂಕಣವನ್ನು ನಮ್ಮ ಪತ್ರಿಕೆಯಲ್ಲಿ ಪ್ರಾರಂಭಿಸುತ್ತಿದ್ದು ತಮ್ಮಿಂದ ಲೇಖನ ಹಾಗೂ ಒಂದು ತಮ್ಮ ಪಾಸ್‌ಪೋರ್ಟ್ ಸೈಜ್ ಛಾಯಾಚಿತ್ರ ಪ್ರಕಟಣೆಗೆ ಅಪೇಕ್ಷಿಸುತ್ತೇವೆ.


ನಮ್ಮ ಸಮುದಾಯದವರು ಸಾರ್ವಜನಿಕವಾಗಿ ಸಮುದಾಯದ ಏಳಿಗೆಗೆ ನಾನಾ ರೀತಿಯ ಪುದುವಟ್ಟುಗಳನ್ನು ಪ್ರಾರಂಭಿಸಿರುತ್ತಾರೆ. ಇದರ ಬಗ್ಗೆ ವಿವರ ನೀಡಿದಲ್ಲಿ ನಾವು ಪ್ರಕಟಿಸುವವರಿದ್ದೇವೆ. ಈ ಬಾರಿ 'ಸಮತ್ವ ಪ್ರತಿಷ್ಠಾನ'ದ ಬಗ್ಗೆ ವಿವರ ನೀಡಲಾಗಿದೆ.

ಶುಭ ಹಾರೈಸುವ



**ಎಸ್.ಸಿ. ಶ್ರೀನಿವಾಸ**
ಕಾರ್ಯದರ್ಶಿಗಳು
ಎಂ.ಎಂ.ಡಿ.ಬಿ.ಎಸ್.

ಗಾಂಧಿ ಜಯಂತಿ ವಿಶೇಷ



**'ವೈಷ್ಣವ ಜನ ತೋ'** ಗಾಂಧೀಜಿಯ ಪ್ರಿಯ ಗೀತೆ.

ಅಕ್ಟೋಬರ್ 2 ರಂದು ಪ್ರತೀ ವರ್ಷ ಗಾಂಧೀ ಜಯಂತಿ ಆಚರಿಸುವುದು ರೂಢಿಯಲ್ಲಿದೆ. ಈ ವರ್ಷ ಅವರ 150ನೇ ಜನ್ಮ ವರ್ಷ. ಮಹಾತ್ಮಾ ಗಾಂಧೀಜಿಯವರ ಅತೀ ಪ್ರಿಯವಾದ **"ವೈಷ್ಣವ ಜನ ತೋ"** ಎಂಬ ಗೀತೆಯ ಕರ್ತೃ ಗುಜರಾತಿ ಭಾಷೆಯ ಆದಿಕವಿ **ನರಸಿನ್ಹ್ ಮೆಹ್ತಾ.** (ಇವರ ಬಗ್ಗೆ ಗೌರವ ಸೂಚಿಸಲು ಕೇಂದ್ರ ಸರ್ಕಾರವು ಅಂಚೆ ಚೀಟಿಯನ್ನು ಹೊರ ತಂದಿದೆ). ಭಾರತ ರತ್ನ ಎಮ್.ಎಸ್. ಸುಬ್ಬಲಕ್ಷ್ಮಿಯವರು ಸುಮಧುರ ಕಂಠದಿಂದ ಭಾವಪೂರ್ಣವಾಗಿ ಗಾಂಧೀಜಿಯವರೆದುರಲ್ಲೇ ಈ ಹಾಡು ಪ್ರಸ್ತುತ ಪಡಿಸಿದ್ದಾರೆ. ಇದರ ಅರ್ಥ ತಿಳಿದಾಗ ಹಾಡಿನ ಮಹತ್ವ ಅರಿವಾಗುತ್ತದೆ. ಇದಕ್ಕಾಗಿ ಸ್ವಲ್ಪ ಪ್ರಯತ್ನಿಸೋಣ.




ವೈಷ್ಣವ ಜನ ತೋ ತೇನೇ
ಕಹಿಯೇ ಜೇ ಪೀಡ ಪರಾಯೀ ಜಾಣೇ ರೇ!
ಪರದುಃಖೇ ಉಪಕಾರ ಕರೇ
ತೋಯೇ ಮನ ಅಭಿಮಾನ ನ ಆಣೇ ರೇ!!

ಇಲ್ಲಿ ವೈಷ್ಣವ ಎಂದರೆ ಮೇಲ್ನೋಟಕ್ಕೆ ವಿಷ್ಣು ಭಕ್ತ ಎಂದು ಅರ್ಥ. ಆದರೆ ಪಾರಮಾರ್ಥಿಕವಾಗಿ ವೈಷ್ಣವ ಎಂದರೆ ಸಕಲ ಚರಾಚರಗಳಲ್ಲೂ ವಿಶುದ್ಧ ಚೈತನ್ಯವೇ ತುಂಬಿದೆ ಎಂದು ಸದಾ ಪ್ರಜ್ಞಾಪೂರ್ವಕವಾಗಿ ದರ್ಶಿಸುವವನು. ಭಕ್ತನು ಯಾರನ್ನೂ ಹಿಂಸಿಸದೆ ಅವರ ದುಃಖಗಳನ್ನು ಅರಿತು ತನ್ನ ಅಭಿಮಾನವನ್ನು (ದೇಹಭಾವವನ್ನು) ತೊರೆದು ಲೋಕಹಿತ ದೃಷ್ಟಿಯಿಂದ ಒಳಿತನ್ನು ಮಾಡುತ್ತಿರುತ್ತಾನೆ ಎಂದು ಈ ಸಾಲುಗಳಲ್ಲಿ ಹೇಳಿದ್ದಾರೆ.

ಸಕಳ ಲೋಕಮಾ ಸಹುನೇ ವಂದೇ
ನಿಂದಾ ನ ಕರೇ ಕೇನಿ ರೇ!
ವಾಚ ಕಾಛ ಮನ ನಿಶ್ಚಲ ರಾಖೇ
ಧನ ಧನ ಜನನೀ ತೇನೀ ರೇ!!

ವೈಷ್ಣವನಾದವನು ಎಲ್ಲವನ್ನೂ ಸಹನೆಯಿಂದ ತಾಳಿ ಕೊಂಡು ಲೋಕವೆಲ್ಲಾ ನಿಂದಿಸಿದರೂ ತಾಳ್ಮೆಯ ಸ್ವರೂಪ ನಾಗಿರುವವನು. ಜಗತ್ತಿನಲ್ಲಿ ಸಕಲ ಐಶ್ವರ್ಯವು ತುಂಬಿ ತುಳುಕುತ್ತಿದ್ದರೂ ಅದರತ್ತ ಕಾಯ, ವಾಚ, ಮಾನಸ ನಿಶ್ಚಲನಾಗಿರುತ್ತಾನೆ.

ಸಮದೃಷ್ಟಿ ನೇ ತೃಷ್ಣಾ ತ್ಯಾಗೀ ಪರಸ್ತ್ರೀ
ಜೇನೇ ಮಾತಾ ರೇ!
ಜಿಹ್ವಾ ಥಕೀ ಅಸತ್ಯ ನ ಬೋಲೇ ಪರಧನ
ನ ವಝಾಲೇ ಹಾಥ ರೇ!!

ವೈಷ್ಣವನು ಮೇಲು–ಕೀಳು ಎಂದು ನೋಡದೆ ಎಲ್ಲರಲ್ಲೂ ಸಮಭಾವ ಹೊಂದಿ ಆಸೆಯನ್ನು ತ್ಯಾಗ ಮಾಡಿರುತ್ತಾನೆ. ಹೆತ್ತ ತಾಯಿಯಂತಯೇ ಎಲ್ಲಾ ಮಹಿಳೆಯರನ್ನೂ ಗೌರವಿಸುತ್ತಾನೆ, ಎಂತಹ ಸಂದರ್ಭ ಬಂದರೂ ಎಂದಿಗೂ ಅಸತ್ಯ ನುಡಿಯುವುದಿಲ್ಲದವನು ಮತ್ತು ಎಂದಿಗೂ ಪರರ ಸ್ವತ್ತಿಗೆ ಆಸೆ ಪಡದವನಾಗಿರುತ್ತಾನೆ.

ಮೋಹ ಮಾಯಾ ವ್ಯಾಪೇ ನಹಿ ಜೇನೇ
ದೃಢ ವೈರಾಗ್ಯ ಜೇನಾ ಮನಮಾ ರೇ!
ರಾಮನಾಮಶು ತಾಲೀ ಲಾಗೀ
ಸಕಲ ತೀರಥ ತೇನಾ ತನಮಾ ರೇ!!

ಮೋಹಮಾಯೆಯ ಬಲೆಗೆ ಬೀಳದೆ ವೈರಾಗ್ಯವೇ ಮೈವೆತ್ತಂತಿರುತ್ತಾನೆ. ರಾಮನಾಮವನ್ನು ಮೈಗೂಡಿಸಿ ಕೊಂಡು ಸಕಲ ತೀರ್ಥಗಳಲ್ಲಿ ಮಿಂದಾಗ ಬರುವ ಪುಣ್ಯ ವನ್ನು ತನ್ನ ಕಾಯಕದಲ್ಲೇ ಕಂಡುಕೊಳ್ಳುತ್ತಿರುತ್ತಾನೆ.

ವಣಲೋಭೀನೇ ಕಪಟರಹಿತ ಛೇ
ಕಾಮ ಕ್ರೋಧ ನಿವಾರ್ಯ ರೇ!
ಭಣೇ ನರಸ್ಯೆಯೋ ತೇನು ದರಸನ ಕರತಾ
ಕುಲ ಏಕೋತೇರ ತಾರ್ಯಾ ರೇ!!

ವೈಷ್ಣವನು ಲೋಭ ಮತ್ತು ಕಪಟರಹಿತನಾಗಿ, ಕಾಮ ಕ್ರೋಧಗಳನ್ನು ನಿವಾರಿಸಿಕೊಂಡವನಾಗಿರುತ್ತಾನೆ. ಕವಿ (ಸಂತ) ಈ ಚರಣದಲ್ಲಿ ತನ್ನ ಕಾವ್ಯನಾಮದೊಂದಿಗೆ ಎಂತಹ ಕುಲದವನಾದರೂ ಇಂತಹ ವೈಷ್ಣವನಿಗೆ ನರಸನ (ಭಗವಂತನ) ದರ್ಶನವಾಗುತ್ತದೆ ಎಂದು ವಚನವಿತ್ತಿದ್ದಾನೆ.



◆ **ಆರ್.ರಮೇಶ್**
**9886034048**

# ವೃತ್ತಿ – ತೃಪ್ತಿ

**"ಎಲ್ಲರೂ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ"** ಎಂಬ ಸುಪ್ರಸಿದ್ಧ ನಾಣ್ಣುಡಿಯಂತೆ ಮಾನವನು ತನ್ನ ಜೀವನದ ಅಗತ್ಯಗಳಿಗೆ (ಆಹಾರ, ವಸ್ತ್ರ, ವಸತಿ) ಯಾವುದಾದರೂ ಒಂದು ವೃತ್ತಿಯಲ್ಲಿ ತೊಡಗಿಕೊಂಡಿರುತ್ತಾನೆ. ತನ್ನ ವೃತ್ತಿಗೆ ತಕ್ಕಂತೆ ವರಮಾನ ಪಡೆಯುತ್ತಿರುತ್ತಾನೆ. ವರಮಾನಕ್ಕೆ ತಕ್ಕಂತೆ ತನ್ನ ಜೀವನವನ್ನು ನಡೆಸುವುದರಿಂದ ತೃಪ್ತಿಯ ಭಾವ ಬರುತ್ತದೆ. ಕೆಲವು ಬಾರಿ ವರಮಾನಕ್ಕೆ ಮೀರಿದ ಸಂದರ್ಭ ಒದಗುವುದು ಸಹಜವಾದರೂ, ಮಿತಿಯನ್ನು ಅರಿತು ಜೀವನ ನಡೆಸಬೇಕು. ಇದು ಕೈ ಮೀರಿದಾಗ ಜೀವನ ದುಸ್ತರವಾಗಿ ಅನವಶ್ಯಕ ಕಷ್ಟಗಳಿಗೆ ಗುರಿಯಾಗಬೇಕಾಗುತ್ತುದೆ.

ಸಾಮಾನ್ಯವಾಗಿ ವಿದ್ಯಾಭ್ಯಾಸಕ್ಕೆ ತಕ್ಕಂತೆ ವೃತ್ತಿ ದೊರೆಯುವುದು ಸುದುರ್ಲಭ. ಬುದ್ಧಿಯ ಪೂರ್ಣ ಬಳಕೆಯಾದಾಗ ದೊರೆತದ್ದರಲ್ಲೇ ಸಾಮರ್ಥ್ಯವನ್ನು ಪ್ರದರ್ಶಿಸಬಹುದು. ಆಗ ತೃಪ್ತಿಗೆ ಇದು ಒಂದು ಮಾರ್ಗವಾಗುತ್ತದೆ. ವೃತ್ತಿಯನ್ನು ಇಷ್ಟಪಟ್ಟು ಮಾಡಿದರೆ ಅದರಲ್ಲಿ ಕಷ್ಟ ಕಾಣುವುದಿಲ್ಲ.

ವೃತ್ತಿ ಜೀವನದ ಪ್ರಾರಂಭಿಕ ಹಂತದಲ್ಲಿ ಕಲಿಯುವಿಕೆ ಮುಖ್ಯ. ಅದೇ ಸಂದರ್ಭದಲ್ಲಿ ಕೆಲವು ಕಷ್ಟಗಳನ್ನು ಎದುರಿಸಲೇಬೇಕಾಗುತ್ತದೆ. ಇವುಗಳನ್ನು ಮೀರಿ ಧೈರ್ಯದಿಂದ ಮುನ್ನುಗ್ಗಿದಾಗ ಮುಂದಿನ ಜೀವನ ಸುಗಮವಾಗುತ್ತದೆ. ತೃಪ್ತಿ ಎನ್ನುವುದು ವೃತ್ತಿಯಲ್ಲಿರುವುದಿಲ್ಲ. ಅದು ಅವರವರ ಮನಸ್ಸಿನ ಸ್ಥಿತಿ. ವೃತ್ತಿಯಿಂದ ಬರುವ ಆದಾಯವನ್ನು ಸದುಪಯೋಗಪಡಿಸಿಕೊಳ್ಳಬೇಕು. ಮೊದಲು ಸಂಸಾರದ ಅತ್ಯವಶ್ಯಕತೆಯನ್ನು ಪೂರೈಸಬೇಕು. ನಂತರದ ಹಂತದಲ್ಲಿ ಸೌಲಭ್ಯದ ಕಡೆ ಗಮನಹರಿಸಬೇಕು. ಇದನ್ನು ಪೂರೈಸಿದ ಮೇಲೆ ಇನ್ನೂ ಹೆಚ್ಚಿನ ಸೌಕರ್ಯದತ್ತ ಬೇಕಾದರೆ ಹಣ ವ್ಯಯಿಸಬೇಕು. ಆದರೆ, ಇದಕ್ಕೆ ತಕ್ಕಂತೆ ಪರಿಶ್ರಮ ಇರಬೇಕು ಮತ್ತು ಅರ್ಹತೆಗಳಿಸಿರಬೇಕು. ಸೌಲಭ್ಯದಿಂದ ಸೌಕರ್ಯ ದೊರೆತರೂ ಸ್ವಲ್ಪ ಸಮಯದ ನಂತರ ಅದರ ಬಗ್ಗೆ ನಮಗಿರುವ ಆಸಕ್ತಿ ನಶಿಸುತ್ತದೆ.

ತೃಪ್ತಿಯ ನೆಲೆ ಕಂಡುಕೊಳ್ಳುವುದು ಅವರವರ ಕೈಯ್ಯಲ್ಲಿದೆ. ಏಕೆಂದರೆ ಮೊದಲು ತನ್ನ ಜೀವನದಲ್ಲಿ ತನಗೆ ಏನು, ಎಷ್ಟು, ಯಾವಾಗ, ಯಾಕೆ, ಎಲ್ಲಿ, ಹೇಗೆ ಬೇಕು ಎನ್ನುವುದು ತಾನೇ ನಿರ್ಧರಿಸಬೇಕು. ಇಲ್ಲಿ ಯಾವುದೇ ಅಭಿಪ್ರಾಯಗಳು ಬಂದರೂ ವಿಚಲಿತನಾಗದೆ ನಿಶ್ಚಿಂತೆಯಿಂದ ಮುಂದುವರೆಯಬೇಕಾದುದು ಅವರವರ ನಿರ್ಣಯಕ್ಕೆ ಸಂಬಂಧಿಸಿದ್ದು.

ವೃತ್ತಿ ಜೀವನ ತೃಪ್ತಿಯಿಂದಿರಬೇಕಾದರೆ ಅದನ್ನು ಆನಂದದಿಂದ ಮಾಡಬೇಕೆ ಹೊರತು, ಆನಂದಕ್ಕಾಗಿ ಅಲ್ಲ. ಪ್ರತೀ ಕ್ಷಣವನ್ನೂ ಧನಾತ್ಮಕವಾಗಿ ಚಿಂತನೆ ಮಾಡಬೇಕು. ಇದು ತನಗಲ್ಲದೆ ತನ್ನ ಪರಿಸರ, ಪರಿವಾರದವರಿಗೂ ಹಿತ ತರುತ್ತದೆ.

ವೃತ್ತಿ ಜೀವನದಲ್ಲಿ ಯಶಸ್ಸು ಕಾಣುವುದು ಎಲ್ಲರ ಬಯಕೆ ಆಗಿರುತ್ತದೆ. ಆದರೆ ಯಶಸ್ಸು ಎನ್ನುವುದು ಹೋಲಿಕೆಗೆ ಸಂಬಂಧಪಟ್ಟಿದ್ದು. ಎಲ್ಲವೂ ತನ್ನ ಪಾಲಿಗೆ ಬಂದದ್ದು, ಕರ್ತವ್ಯ ಎಂದು ಮಾಡುತ್ತಿರಬೇಕು. ವೃತ್ತಿ ಮಾಡುತ್ತಿರುವ ಕಾರಣಕ್ಕೆ ತಾನು ಮಾಡುವುದು ಶ್ರೇಷ್ಠವೆಂದು ಮತ್ತು ಇತರರು ಮಾಡುವುದು ಕನಿಷ್ಠವೆಂದು ಭಾವಿಸಬಾರದು ಮತ್ತು ಕೌಟುಂಬಿಕ ಜೀವನದ ಕೆಲಸಗಳಿಂದ ನುಣಿಚಿಕೊಳ್ಳಬಾರದು. ವೃತ್ತಿಪರರು ಪುರುಷರಾಗಲೀ ಅಥವಾ ಮಹಿಳೆಯರಾಗಲೀ, ಗೃಹಕೃತ್ಯದಲ್ಲಿ ತೊಡಗಿರುವವರನ್ನು ಸಾಮಾನ್ಯವಾಗಿ ಕ್ಷುಲ್ಲಕವಾಗಿ ಕಾಣುತ್ತಾರೆ. ಅದೂ ಒಂದು ವೃತ್ತಿಯೇ. "ಒಂದು ನಿಮಿಷ ಪುರುಸೊತ್ತಿರಲ್ಲ. ಒಂದು ಪೈಸೆ ಸಂಪಾದನೆ ಇರಲ್ಲ"!!! ಯಾವುದೇ ಸಂದರ್ಭದಲ್ಲಿ ವೃತ್ತಿಯ ಜೀವನದ ಆಗು–ಹೋಗುಗಳನ್ನು ಕೌಟುಂಬಿಕ ಜೀವನದಲ್ಲಿ ಹಂಚಿಕೊಳ್ಳಬಹುದು ಆದರೆ ಕುಟುಂಬ ಜೀವನಕ್ಕೆ ಬೆರಸಿ ಅನವಶ್ಯಕ ವೈಮನಸ್ಯಕ್ಕೆ ಒಳಗಾಗಬಾರದು.


ವೃತ್ತಿಯಲ್ಲೇ ಅಲ್ಲದೆ ಎಲ್ಲಾ ಕ್ಷೇತ್ರಗಳಲ್ಲೂ ವೈಜ್ಞಾನಿಕ ಬೆಳವಣಿಗೆ ಹೆಚ್ಚಿದಂತೆಲ್ಲಾ ಮಾನವನು ಭೌತಿಕ ವಸ್ತುಗಳಿಗೆ ಹೆಚ್ಚು ಆದ್ಯತೆ ಕೊಡುತ್ತಿದ್ದು ಮಾನವ–ಮಾನವರ ನಡುವೆ ಸಹಜ ಸಂಬಂಧ ಕ್ಷೀಣಿಸುತ್ತಿದೆ. ಕೇವಲ ಹಣ ಸಂಪಾದನೆಗಾಗಿ ಅಲ್ಲದೆ ಸಹೋದ್ಯೋಗಿಗಳೊಂದಿಗೆ ಸೌಹಾರ್ದ, ಸಂಯಮ, ಸಹನೆ, ನೆಮ್ಮದಿ ನೆಲೆಸಿರುವಂತೆ ವೃತ್ತಿಯಲ್ಲಿರಬೇಕು. ತೃಪ್ತಿ ಆಗ ತಾನಾಗೇ ವೃತ್ತಿಯೊಂದಿಗೆ ಜೊತೆಯಾಗಿರುತ್ತದೆ. ವೃತ್ತಿ ಜೀವನದಲ್ಲಿ ತೃಪ್ತಿ ಕಾಣುವುದು ಸವಾಲೇನಲ್ಲ. ತನ್ನ ಮೇಲಧಿಕಾರಿ ಮತ್ತು ಕೈಕೆಳಗಿನ ಸಹೋದ್ಯೋಗಿಗಳೊಂದಿಗೆ ಕುಶಲತೆಯಿಂದ ವರ್ತಿಸಿದಾಗ ಕೆಲಸ ಕಾರ್ಯಗಳು ಸರಾಗವಾಗಿ ನಡೆಯುತ್ತದೆ.

ವೃತ್ತಿಯ ಬದುಕು ಕೇವಲ ಕೆಲವು ದಶಕಗಳು ಮಾತ್ರ. ಜೀವನ ಅದಕ್ಕೂ ಮೀರಿರುವುದು. ವೃತ್ತಿಯ ನಂತರದ ಬಾಳು ಅಸಹನೀಯವಾಗದಿರಬೇಕಾದರೆ ಮುಂಚಿನಿಂದಲೂ ಯಾವುದಾದರೂ ಒಂದು ಹವ್ಯಾಸ ಬೆಳೆಸಿಕೊಂಡಿರಬೇಕು. ಅದು ನಿವೃತ್ತಿ ಜೀವನವನ್ನು ಸುಂದರವಾಗಿಸುತ್ತದೆ.

ವೃತ್ತಿಯಲ್ಲಿ ನಿರೀಕ್ಷೆಯು ಸಹಜ ಮತ್ತು ತಪ್ಪಲ್ಲ. ತಾನು ನಿರ್ವಹಿಸಿದ ಕಾಯಕಕ್ಕೆ ಪ್ರತಿಫಲ ಅಪೇಕ್ಷಿಸುವುದು ನಿರೀಕ್ಷೆ ಎನಿಸುತ್ತದೆ ಮತ್ತು ಅದು ಬಂದೇ ಬರುತ್ತದೆ. ಆದರೆ ತನ್ನ ಅರ್ಹತೆಗೆ ಮೀರಿದ ನಿರೀಕ್ಷೆ ಆಸೆ ಎನಿಸುತ್ತದೆ. ಆಸೆ ಎಂದರೆ ತನಗೆ ಪೂರ್ಣ ಜ್ಞಾನವಿಲ್ಲದ ವಸ್ತು, ವ್ಯಕ್ತಿ, ವಿಚಾರವನ್ನು ಇಷ್ಟಪಡುವುದು. ನಮ್ಮ ಸಮುದಾಯದವರೇ ಆದ ದಾರ್ಶನಿಕ ಪೂಜ್ಯ ಡಿ.ವಿ.ಜಿ.ಯವರು ಜೀವನದ ಸಂತೃಪ್ತಿಗಾಗಿ "ಆಶಾ ಪರಿಮಿತಿ" ಇರಬೇಕು ಎಂದು ತಮ್ಮ "ಜೀವನ ಧರ್ಮಯೋಗ" ದಲ್ಲಿ ಪ್ರತಿಪಾದಿಸಿದ್ದಾರೆ. ಕರ್ಮಾಸಕ್ತಿ, ಫಲವಿರಕ್ತಿ ಎಂಬುದು ಡಿ.ವಿ.ಜಿ.ಯವರ ಚಿಂತನೆಯಲ್ಲಿ ಬಂದಿದೆ. ಫಲಾಪೇಕ್ಷೆ ಅಧಿಕವಾದಾಗ ತೃಪ್ತಿ ದೂರದಲ್ಲಿ ಉಳಿಯುತ್ತದೆ. ಸದಾ ಕರ್ಮಕ್ಕೆ ತಕ್ಕಂತೆ ಫಲ, ನಮ್ಮ ಇಚ್ಛೆಯಂತಲ್ಲ.

◆ **ಆರ್. ರಮೇಶ್**

# ಶ್ರೀರಾಮ ಮತ್ತು ಗುಹ



**ಪ್ರ**ಸಿದ್ಧಿ ಪಡೆದ ದೇವಾಲಯಗಳಲ್ಲಿ ಭಗವಂತನ ದರ್ಶನ ಪಡೆಯುವುದು ಅಷ್ಟು ಸುಲಭವಲ್ಲ. ದರ್ಶನ ಪಡೆಯಲು ಎಷ್ಟೇ ಪೂರ್ವ ಸಿದ್ಧತೆಗಳನ್ನು ಮಾಡಿಕೊಂಡಿದ್ದರೂ ಅನೇಕ ವೇಳೆ ಗಂಟೆಗಟ್ಟಲೆ ಸಾಲುಗಳಲ್ಲಿ ನಿಲ್ಲುವುದು ಅನಿವಾರ್ಯ. ಇಂತಹ ಸಂದರ್ಭದಲ್ಲಿ ಸಂಬಂಧಪಟ್ಟ ಸಿಬ್ಬಂದಿಯಲ್ಲೋ, ಅಧಿಕಾರಿಗಳಲ್ಲೋ ವಿನಂತಿಸಿ, ಏನಾದರೊಂದು ಕುಂಟು ನೆಪ ಹೇಳಿ ನಮ್ಮ ಕಾರ್ಯಸಾಧನೆ ಮಾಡಿಕೊಳ್ಳುವ ಪ್ರಯತ್ನ ಮಾಡುವುದು ಸಹಜ. ಆದರೆ, ಆಕಸ್ಮಿಕವಾಗಿ ನಾವಿರುವಲ್ಲಿಗೇ ಭಗವಂತನು ಆಗಮಿಸಿದಲ್ಲಿ ಅದಕ್ಕಿಂತ ಭಾಗ್ಯ ಉಂಟೇ?

ಅದೇ ರೀತಿಯಲ್ಲಿ 'ಗುಹ' ತಾನಿರುವಲ್ಲಿಗೇ ಶ್ರೀರಾಮ, ಸೀತೆ, ಲಕ್ಷ್ಮಣರೊಂದಿಗೆ ಆಗಮಿಸಿದಾಗ, ಗುಹನ ಸಂತೋಷಕ್ಕೆ ಪಾರವೇ ಇಲ್ಲ.

ಅನೇಕರಿಗೆ, ಬಾಲ್ಯದ ದಿನಗಳಲ್ಲಿ, ವಿಶೇಷವಾಗಿ ಶನಿವಾರ ಗಳಂದು ಸಂಜೆಯ ವೇಳೆಯಲ್ಲಿ ಶ್ರೀರಾಮ ನಾಮದ ಭಜನೆಯಲ್ಲಿ ಮೈಮರೆಯುತ್ತಿದ್ದ ನೆನಪುಗಳು ಇನ್ನೂ ಮಾಸಿಲ್ಲ.

**। ಶುದ್ಧಬ್ರಹ್ಮಪರಾತ್ಪರ ರಾಮ ಕಾಲಾತ್ಮಕಪರಮೇಶ್ವರ ರಾಮ ।**

............................

ಪ್ರಿಯ 'ಗುಹ' ವಿನಿವೇದಿತ ಪದ ರಾಮ.

ಶ್ರೀರಾಮ ನಾಮದಲ್ಲಿ ಗುಹನ ಉಲ್ಲೇಖವಿದೆ. ಶ್ರೀರಾಮ ಮತ್ತು ಗುಹ ನಡುವಿನ ಒಂದು ಪ್ರಸಂಗದ ಬಗ್ಗೆ ಈ ವಿವರಣೆ. ದಶರಥ ಮಹಾರಾಜ ತನ್ನ ಪತ್ನಿ ಕೈಕೇಯಿಗೆ ನೀಡಿದ ವಾಗ್ದಾನದಂತೆ ಭರತನಿಗೆ ಪಟ್ಟಾಭಿಷೇಕ ಮತ್ತು ಶ್ರೀರಾಮ ಹದಿನಾಲ್ಕು ವರ್ಷ ವನವಾಸಕ್ಕೆ ಹೋಗಬೇಕಾದ ಸಂದರ್ಭ. ಪಿತೃ ವಾಕ್ಯ ಪರಿಪಾಲಕ ಶ್ರೀರಾಮ, ತಂದೆ ದಶರಥನ ಆದೇಶದಂತೆ ಸೀತೆ ಮತ್ತು ಲಕ್ಷ್ಮಣನೊಂದಿಗೆ ವನವಾಸಕ್ಕೆ ಹೊರಟಿದ್ದು ಎಲ್ಲರೂ ಓದಿದ್ದೇವೆ, ಕೇಳಿದ್ದೇವೆ.

ಶ್ರೀರಾಮನ ವನವಾಸದ ಸಮಯದಲ್ಲಿ ಅವರು ಗಂಗಾ ನದಿಯನ್ನು ದಾಟಬೇಕಾದ ಅನಿವಾರ್ಯತೆ. ನದಿಯ ಒಂದು ದಡದಿಂದ ಮತ್ತೊಂದು ದಡವನ್ನು ದೋಣಿಯ ಮೂಲಕವೇ ಸೇರಬೇಕಿತ್ತು.

ನದಿಯ ತಟಕ್ಕೆ ಬಂದ ಶ್ರೀರಾಮ, ಸೀತೆ, ಲಕ್ಷ್ಮಣರನ್ನು ಕಂಡ. ಅಂಬಿಗನಾದ ಶ್ರೀರಾಮನ ಪರಮ ಭಕ್ತ 'ಗುಹ' ಓಡೋಡಿ ಬಂದು ಶ್ರೀರಾಮ, ಸೀತೆ, ಲಕ್ಷ್ಮಣರನ್ನು ತನ್ನ ದೋಣಿ ಏರುವಂತೆ ವಿನಂತಿಸಿಕೊಂಡ. ಭಕ್ತನಾದ ಗುಹನಿಗೆ, ಹೇಗಾದರೂ ಶ್ರೀರಾಮನ ಪಾದಗಳನ್ನು ತೊಳೆದು, ನಮಸ್ಕರಿಸುವ ಮನದಾಳದ ಅಭಿಲಾಷೆ. ಆದರೆ, ಶ್ರೀರಾಮ ಪಾದ ಸ್ಪರ್ಶಕ್ಕೆ ಒಪ್ಪುತ್ತಾನೋ ಇಲ್ಲವೋ ಎಂಬ ಸಂಶಯ. ಆದರೂ ಕೈಗೆ ಸಿಕ್ಕ ಅವಕಾಶವನ್ನು ಬಿಡಲು ಸಾಧ್ಯವೇ? ಏನಾದರೂ ಒಂದು ನೆಪ ಒಡ್ಡಿ ಶ್ರೀರಾಮನ ಪಾದಗಳನ್ನು ತೊಳೆದು, ನಮಸ್ಕರಿಸಲೇಬೇಕೆಂಬ ಬಯಕೆ.

ಆಗ ಗುಹ ಮಾಡಿದ ಉಪಾಯ ಸ್ವಾರಸ್ಯಕರವಾದುದು.

ಆ ಸಂಭಾಷಣೆಯನ್ನು ಆನಂದಿಸೋಣ.

**ಗುಹ :** ಶ್ರೀರಾಮಚಂದ್ರ ಪ್ರಭುವೇ, ಈ ನದಿಯ ನೀರಿನಿಂದ ನಾನು ತಮ್ಮ ಪಾದಗಳಿಗೆ ಅಂಟಿಕೊಂಡಿರುವ ಕಲ್ಲಿನ ಕಣಗಳನ್ನು ಶುಚಿ ಮಾಡುವೆ, ನಂತರ ನನ್ನ ದೋಣಿಯಲ್ಲಿ ಕುಳಿತುಕೊಳ್ಳಿ.

**ಶ್ರೀರಾಮ :** ಗುಹನ ಅಂತರಂಗದ ಅಭಿಲಾಷೆ ಏನೆಂದು ತಿಳಿದರೂ, ಪಾದಗಳನ್ನು ಶುಚಿ ಮಾಡಿಕೊಳ್ಳುವ ಪ್ರಮೇಯ ವಾದರೂ ಏಕೆ? ನನ್ನ ಕಾಲಿಗೆ ಅಂಟಿಕೊಂಡಿರುವ ಕಲ್ಲಿನ ಕಣಗಳಿಗೂ, ನಾನು ದೋಣಿಯಲ್ಲಿ ಕುಳಿತುಕೊಳ್ಳಲೂ ಸಂಬಂಧವಾದರೂ ಏನು?

**ಗುಹ :** ಶ್ರೀರಾಮಚಂದ್ರ ಪ್ರಭುವೇ, ಈ ಹಿಂದೆ ಗೌತಮರ ಶಾಪಕ್ಕೆ ಗುರಿಯಾಗಿ ಕಲ್ಲಾಗಿ ಹೋದ ಅಹಲ್ಯೆಯು ನಿನ್ನ ಪಾದ ಸ್ಪರ್ಶದಿಂದ ಶಾಪ ವಿಮೋಚನೆ ಹೊಂದಿ, ಮರುಜೀವ ಪಡೆದದ್ದು ನನಗೆ ತಿಳಿದಿದೆ. ನಾನು ಬಡವ! ಈ ದೋಣಿ ನಡೆಸುವ ಆದಾಯದಿಂದ ನನ್ನ ಸಂಸಾರ ನಡೆಯಬೇಕು, ಈ ದೋಣಿಯೇ ನನ್ನ ಬದುಕು. ಹಾಗಿರುವಾಗ, ತಾವು ದೋಣಿಯಲ್ಲಿ ಕುಳಿತಾಗ, ತಮ್ಮ ಪಾದಕ್ಕೆ ಅಂಟಿಕೊಂಡಿರುವ ಕಲ್ಲಿನ ಕಣಗಳೆಲ್ಲವೂ ಅಹಲ್ಯೆಯಂತೆ ಕನ್ಯಾಮಣಿಗಳಾಗಿ ಜೀವ ಪಡೆದಲ್ಲಿ ನನ್ನ ಗತಿಯೇನು, ಅವರ ಜವಾಬ್ದಾರಿ, ನಿರ್ವಹಣೆ ನನ್ನ ಹೆಗಲೇರಿ, ಬದುಕಿಗೆ ಎಲ್ಲಿ ಕಂಟಕವಾದೀತೋ ಎಂಬ ಸಂದೇಹ. ಹಾಗಾಗಿ ತಮ್ಮ ಕಾಲಿಗೆ ಅಂಟಿಕೊಂಡಿರು ಕಲ್ಲಿನ ಕಣಗಳನ್ನು ತೊಳೆಯುವ ಅವಕಾಶ ನನ್ನ ಪಾಲಿಗೆ ದೊರೆಯಲಿ ಎಂಬ ವಿನಂತಿ.

**ಶ್ರೀರಾಮ :** ಮುಗುಳ್ನಗುತ್ತಾ, ಗುಹನ ಅಂತರಂಗದ ತಳಮಳ, ಪರಮಾತ್ಮನಾದವನಿಗೆ ತಿಳಿಯದೇ? ಆಯಿತು ನಿನ್ನ ಇಷ್ಟದಂತೆ ಆಗಲಿ.

**ಗುಹ :** ಧನ್ಯನಾದೆ, ತಮ್ಮ ಪಾದ ಸ್ಪರ್ಶದಿಂದ ನನ್ನ ಜೀವನ ಪಾವನವಾದೀತು.

ತನ್ನ ಜೀವನದಲ್ಲಿನ ಕನಸು ನನಸಾದ ಸಂತೋಷದಲ್ಲಿ, ಗುಹ ತನ್ನ ದೋಣಿಯಲ್ಲಿ ಶ್ರೀರಾಮ, ಸೀತೆ, ಲಕ್ಷ್ಮಣರನ್ನು ನದಿಯ ಮತ್ತೊಂದು ದಡಕ್ಕೆ ಕರೆತಂದ. ಶ್ರೀರಾಮ, ಸೀತೆ, ಲಕ್ಷ್ಮಣ ನದಿಯ ಮತ್ತೊಂದು ದಡ ಸೇರಿ, ದೋಣಿಯಿಂದ ಕೆಳಗೆ ಇಳಿದರು. ನದಿಯನ್ನು ದಾಟಿಸಿದ ಗುಹನಿಗೆ ಶ್ರೀರಾಮ ಬಂಗಾರದ ನಾಣ್ಯ ನೀಡಲು ಮುಂದಾದ.

**ಗುಹ :** ಇದೇನು ಪರಮಾತ್ಮ ನಿನ್ನಿಂದ ನಾನು ಹಣ ಸ್ವೀಕರಿಸುವುದೇ, ಇದ್ಯಾವ ನ್ಯಾಯ!

**ಶ್ರೀರಾಮ :** ನಿನ್ನ ದುಡಿಮೆಗಾಗಿ ನೀಡುತ್ತಿದ್ದೇನೆ ಅಷ್ಟೇ. ಇದರಿಂದಲೇ ನಿನ್ನ ಬದುಕಲ್ಲವೇ ಹಾಗಾಗಿ ಇದನ್ನು ಸ್ವೀಕರಿಸು.

**ಗುಹ :** ಅದು ಸರಿಯೇ, ಆದರೆ ನಾವಿಬ್ಬರೂ ಒಂದೆ ವೃತ್ತಿ ಮಾಡುವವರು ಅಲ್ಲವೇ! ಒಂದೇ ವೃತ್ತಿಯಲ್ಲಿ ಇರುವವರು ಮತ್ತೊಬ್ಬರಿಂದ ಏನನ್ನೂ ಅಪೇಕ್ಷಿಸುವುದು ಸರಿಯಲ್ಲ, ಹಾಗಾಗಿ ನಿನ್ನಿಂದ ಏನನ್ನೂ ಸ್ವೀಕರಿಸಲಾರೆ.

**ಶ್ರೀರಾಮ :** ಅದು ಹೇಗೆ? ನಮ್ಮಿಬ್ಬರದೂ ಒಂದೇ ವೃತ್ತಿ ಎನ್ನುವುದರ ಅರ್ಥವೇನು?

**ಗುಹ :** ಹೇ ಪರಮಾತ್ಮ, ನನ್ನದು ಕೇವಲ ನದಿಯ ಈ ಬದಿಯಿಂದ ಮತ್ತೊಂದು ಬದಿಗೆ ದಾಟಿಸುವುದು ಮಾತ್ರ ವೃತ್ತಿ. ನೀನಾದರೋ, ನಿನ್ನನ್ನು ನಂಬಿದವರನ್ನು "ಭವಸಾಗರ"ವನ್ನೇ ದಾಟಿಸುವವನು ಅಲ್ಲವೇ? ಹಾಗಾಗಿ ನಮ್ಮಿಬ್ಬರ ವೃತ್ತಿ ಒಂದೇ ಅಲ್ಲವೇ?

ಆಹಾ! ಎಂತಹ ಅರ್ಥಗರ್ಭಿತವಾದ ಮಾತು, ಗುಹನ ಈ ಮಾತುಗಳನ್ನು ಕೇಳಿದ ಶ್ರೀರಾಮ ಭಾವಪರವಶನಾಗಿ, ನಿನ್ನ ಭಕ್ತಿಯ ಪರಾಕಾಷ್ಠೆಗೆ ಮೆಚ್ಚಿದ್ದೇನೆ, ಇಂದಿನಿಂದ ನನಗೆ ಮತ್ತೊಬ್ಬ ಸಹೋದರನು ದೊರಕಿದಂತಾಯಿತು ಎಂಬ ಅನುಗ್ರಹದೊಂದಿಗೆ ಆಶೀರ್ವಾದ ಮಾಡಿದ.

ಅಂತರಂಗ ಶುದ್ಧವಾಗಿದ್ದಲ್ಲಿ ಭಕ್ತಿಯ ರಸ ತಾನಾಗಿಯೇ ಹೊರಹೊಮ್ಮುವುದು. ಇಲ್ಲಿ ಪೂಜೆಯ ಸಾಮಗ್ರಿಗಳಾಗಲಿ, ಘಂಟೆ, ಜಾಗಟೆಗಳ ಅವಶ್ಯಕತೆ ಇಲ್ಲ. ತನು ಮನಗಳಿಂದ ಭಗವಂತನ ಪ್ರಾರ್ಥನೆಯೊಂದೇ ಮುಕ್ತಿಗೆ ಮಾರ್ಗ.



◆ **ವಿ.ಎಸ್.ಮಣಿ**
**9845055582**

**ಸಂಘದ ಲೆಕ್ಕಪತ್ರ ಪರಿಶೋಧಕರಾದ ಶ್ರೀ ಬಿ.ಎನ್.ಜಿ. ಪ್ರಸಾದ್‌ರವರು ತಮ್ಮ ಷಷ್ಟಬ್ಧಿ ಶಾಂತಿಯನ್ನು ದಿನಾಂಕ 12–08–19 ರಂದು ಆಚರಿಸಿಕೊಂಡರು. ಈ ಸಂದರ್ಭದಲ್ಲಿ ಸಂಘವು ಶುಭ ಹಾರೈಸುತ್ತದೆ.**


ವಿವಾಹವೆಂಬ ಬಂಧನದಿ
ನಲಿದಾಡಿದಿರಿ ಹರುಷದಿ
ಬಾಲ್ಯ ಯವ್ವನದ ಸಂತಸದಿ
ಕಳೆದಿರಿ ಅರವತ್ತರ ಅವಧಿ

ಬಾಲ್ಯದಲ್ಲಿ ಮರೆದ ತುಂಟಾಟ
ಯವ್ವನದಿ ಗೆಳೆಯರ ಒಡನಾಟ
ನಂತರದಿ ಜೀವನದ ಹೋರಾಟ
ಸಂಗಾತಿ ಸಂಸಾರದೊಂದಿಗೆ ರಸದೂಟ

ತುಂಬಲೆಂದು ನಿಮಗೆ ಅರವತ್ತರ ವಸಂತ
ಭಗವಂತನ ಕೃಪೆ ನಿಮಗಿರಲಿ ಅನಂತ
ಜೀವನದುಯ್ಯಾಲೆ ತೂಗಲಿ ನಗುನಗುತ
ಅಭಿನಂದಿಸುವವು ನಾವು ಅನವರತ

ನಮ್ಮೆಲ್ಲರ ನೆಚ್ಚಿ ಬಿಎನ್‌ಜಿ ಪ್ರಸಾದ್
ನಿಮ್ಮವರಾದ ನಾವು






**ರವಿಕಿರಣ್ ಟಿ.ಎನ್.**

## (ಅ)ವ್ಯವಹಾರ

ಶಿಕ್ಷಣವೆಂಬ ಈ ಮಂತ್ರ
ಇಂದಾಗಿದೆ ಸಂಪೂರ್ಣ ಅತಂತ್ರ
ಪ್ರತಿಯೋರ್ವರಿಗೂ ಇಹುದು ಅವರದೇ ತಂತ್ರ
ಇಂತಿಪ ಜನರಿಗೆಲ್ಲಿಯ ಸ್ವತಂತ್ರ
ಹಲವು ಬಗೆಯ ಶಿಕ್ಷಣ ನೀತಿ
ನೋಡಿದೊಡನೆಯೇ ಹುಟ್ಟುವುದು ಭೀತಿ
ಹೇಸಿಗೆಯಾಗಿದೆ ಅದು ನಡೆವ ರೀತಿ
ಇರುವುದೆಲ್ಲಿ ಇದಕ್ಕೆ ಇತಿ ಮಿತಿ
ಸಾಗಿದೆ ಶಿಕ್ಷಣ ನೀತಿಯ ವ್ಯಾಪಾರ
ಇಂದಿಗದು ಸರಾಗ ಹಾಗೂ ನಿರಂತರ
ಅನೀತಿಯ ವೇಗವರಿತವರಾರು
ಈ ವ್ಯಾಪಾರಕೆ ಅಂತ್ಯ ನೀಡುವವರ್ಯಾರು

ಶಿಕ್ಷಣವು ನಾವು ಪೂಜಿಸುತ್ತಿದ್ದ ರೀತಿ
ಇಂದಿಗದು ಕಂಡಿದೆ ಅಧೋಗತಿ
ಮತ್ತೆ ಬರುವುದೆ ಆ ಹಳೆಯ ನೀತಿ
ಹೋಗಲಾಡಿಸಿ ಶಿಕ್ಷಣರಂಗದ ಅನೀತಿ

**ರವಿಕಿರಣ್ ತಟ್ಟಳ್ಳಿ ನಾಗಭೂಷಣ್**

# ಗುರು–ಬಹುಮುಖ ಪ್ರತಿಭೆಯ ವ್ಯಕ್ತಿ–ಶಕ್ತಿ

**‘ಗುರುರ್ಬ್ರಹ್ಮಾ ಗುರುವಿಷ್ಣುಃ ಗುರುರ್ದೇವೋ ಮಹೇಶ್ವರಃ ಗುರು ಸ್ಸಾಕ್ಷಾತ್ ಪರಂಬ್ರಹ್ಮ ತಸ್ಮೈ ಶ್ರೀ ಗುರುವೇನಮಃ।**

ಗುರು ಎಂದರೆ ನಮ್ಮೆಲ್ಲರ ಮನಸ್ಸಿನಲ್ಲಿ ಉದಾತ್ತ ಭಾವನೆ ಮೂಡುವುದು ಸಹಜ. ಏಕೆಂದರೆ ಗುರುವಿನ ಸಾಧನೆ ಬಹುಮಹತ್ವವಾದದ್ದು. ಗುರುವು ತಂದೆ ತಾಯಿಗಳಂತೆ ಪರಮ ಪೂಜ್ಯರೂ ಹೌದು. ಶಿಷ್ಯರಿಗೆ ಸದ್ಗುರುವಿನ ಆಶ್ರಯ ಅಗತ್ಯ. ಸರ್ವಾಂಗೀಣ ಪ್ರಗತಿಗೆ ಬೇಕಾದ ಪೂರಕ–ಪ್ರೇರಕ – ಮೋಕ್ಷ ಮಾರ್ಗದರ್ಶವೂ ಅತ್ಯಗತ್ಯ. ಗುರುವು ವಿದ್ಯಾರ್ಥಿಗಳನ್ನು ಅಜ್ಞಾನದ ಕತ್ತಲೆಯಿಂದ ಬೆಳಕಿನ ಕಡೆಗೆ ಕೊಂಡೊಯ್ಯುವ ಅವ್ಯಕ್ತ ಅನನ್ಯ ವ್ಯಕ್ತಿ ‘ತಮಸೋಮ ಜ್ಯೋತಿರ್ಗಮಯ.’

ಯಾರಿಗೆ ತಾನು ಬೋಧಿಸುವುದರಲ್ಲಿ ಪಾಂಡಿತ್ಯವಿರುತ್ತದೋ, ಶೋಧನೆಯಲ್ಲಿ ಅಭಿರುಚಿ, ಸಾಮರ್ಥ್ಯ, ಘನತೆ, ಗಾಂಭೀರ್ಯ, ಪ್ರೇರಕ, ಪ್ರೇರಣಾ ಸಾಮರ್ಥ್ಯವಿರುತ್ತದೋ ಅವರೇ ಆದರ್ಶಗುರು.

### ದೇಶದ ಆಸ್ತಿ

ಗುರುಗಳು ದೇಶದ ಆಸ್ತಿ, ಏಕೆಂದರೆ, ಮಕ್ಕಳೇ ಮುಂದಿನ ಜನಾಂಗ. ಈ ಜನಾಂಗವನ್ನು ನಿರ್ಮಾಣ ಮಾಡುವ ಏಕೈಕವ್ಯಕ್ತಿ ಎಂದರೆ ಆದರ್ಶಪರಿಪೂರ್ಣ ವ್ಯಕ್ತಿ. ಪ್ರತಿಯೊಬ್ಬ ಸದ್ಗುರುವು ತನ್ನ ಕರ್ತವ್ಯವನ್ನು ಅತಿ ಶ್ರದ್ಧೆ, ಶಿಸ್ತು, ಸಂಯಮದಿಂದ ಪರಿಪಾಲಿಸಬೇಕು. ಏಕೆಂದರೆ ವಿದ್ಯಾರ್ಥಿಗಳು ಸದ್ಗುರುಗಳ ನಡತೆ, ನಡವಳಿಕೆ, ಆಚಾರ, ವಿಚಾರಗಳನ್ನು ಅನುಸರಿಸುತ್ತಾರೆ, ಅಳವಡಿಸಿಕೊಳ್ಳುತ್ತಾರೆ. ಗುರುವು ವ್ಯಕ್ತಿತ್ವದ ಚಲನಾ ಗ್ರಂಥಾಲಯವಾಗಿರಬೇಕು. ಗುರುವಿನ ಎಲ್ಲಾ ಆದರ್ಶಗಳು ಅಯಸ್ಕಾಂತದಂತೆ ವಿದ್ಯಾರ್ಥಿಗಳನ್ನು ಸೆಳೆಯುವಂತಿರಬೇಕು.

ಸದ್ಗುರುಗಳ ವಿದ್ಯಾಲಯಗಳೂ ಜ್ಞಾನಮಂದಿರಗಳು. ಅಲ್ಲಿ ನಡೆಯುವ ಎಲ್ಲಾ ಚಟುವಟಿಕೆಗಳು ನಿತ್ಯಪೂಜೆ. ಅಲ್ಲಿ ನಡೆಯುವ ವಿದ್ಯಾರ್ಥಿಗಳ ಒಡನಾಟ, ಕ್ರಿಯೆ–ಪ್ರತಿಕ್ರಿಯೆ ಅರ್ಚನೆ. ಈ ರೀತಿಯ ಸತ್ಕಾರ್ಯಗಳು, ಕಾಯ–ವಾಚ, ಮನಸ ಸಾಗುತ್ತಿರಬೇಕು ನಿರಂತರ, ಫಲಾಪೇಕ್ಷೆ ಇಲ್ಲದೆ ಸಾಗಬೇಕು. ಆಗಲೇ ನಿರೀಕ್ಷಿಸದ ಫಲಗಳು ದೊರೆಯುತ್ತದೆ. ಶ್ರೀಕೃಷ್ಣಪರಮಾತ್ಮನು ಅರ್ಜುನನಿಗೆ ಕುರುಕ್ಷೇತ್ರದಲ್ಲಿ ಬೋಧಿಸುತ್ತಿರುವುದನ್ನು ಇಲ್ಲಿ ಗಮನಿಸಬೇಕು. ‘ಕರ್ಮಣ್ಯೇ ವಾಧಿಕಾರಸ್ಥೆ ಮಾ ಫಲೇಷು ಕದಾಚನ’ ಎಂದು. ಇದು ನಿಜದಿಂದ ನಮ್ಮ ಧರ್ಮ, ಇದೇ ನಮ್ಮ ಉದ್ದೇಶವಾಗಿರಬೇಕು. ದೈವೀಕ, ತ್ಯಾಗಸೇವೆ ಶಿಕ್ಷಕರ ಗುರಿಯಾಗಿರಬೇಕು.

ಗುರುವು ಬಹುಮುಖ ಪ್ರತಿಭೆಯ ವ್ಯಕ್ತಿ ಹಾಗೂ ಶಕ್ತಿ. ಈ ಪ್ರತಿಭೆಗಳು ಯಾವುದೆಂದರೆ ಮಾರ್ಗದರ್ಶಕ ದಾರ್ಶನಿಕ, ತತ್ತ್ವಜ್ಞಾನಿ, ಮನೋವಿಜ್ಞಾನಿ, ಸ್ನೇಹಿತ ಮತ್ತು ಪರಿಸರ ಪ್ರೇಮಿ. ಶಿಸ್ತು, ಸಂಯಮ, ಸಮಯ ಪರಿಪಾಲಕರಾಗಿರಬೇಕು ಹಾಗೂ ಶೀಲವಂತರಾಗಿರಬೇಕು. ಫಲಬಲವಾಗಿರಬೇಕು, ಸಾರ್ಥಕರಾಗಿರಬೇಕು.

ಗುರುವು ಬಹುಮುಖ ವ್ಯಕ್ತಿತ್ವವನ್ನು ಮೂಡಿಸಿ ಸನ್ಮಾರ್ಗದಲ್ಲಿ ಮುನ್ನಡೆಯುವಂತೆ ಪ್ರೇರಣೆ ನೀಡಿ ಪ್ರಯೋಗಿಸಬೇಕು. ಆಚಾರ, ವಿಚಾರ, ವಿವೇಕಗಳ ಬಗ್ಗೆ ಮಾರ್ಗದರ್ಶನ ನೀಡಿ ಸಮಾಜದ ಅಭಿವೃದ್ಧಿಗೆ ಕಾರಣರಾಗಬೇಕು. ಆಗಲೇ ಶಿಷ್ಯರು ಸಮಾಜ ಸುಧಾರಣೆಯ ಅಭಿವೃದ್ಧಿಗೆ ಸಿದ್ಧರಾಗಿ ಸಮಾಜ ಸುಧಾರಕರಾಗಲು ಪ್ರಯತ್ನಿಸುತ್ತಾರೆ, ಸುಧಾರಕರಾಗುತ್ತಾರೆ. ಅಸಾಧ್ಯವೇನಲ್ಲ, ಮನಸ್ಸಿದ್ದರೆ ಮಾರ್ಗ.

ಗುರುವಿನಲ್ಲಿ ಆತ್ಮಶಕ್ತಿ ಇರಬೇಕು. ನಾನು ಮಾಡಬಲ್ಲೆ ಎಂಬ ಧೈರ್ಯ–ಸ್ಥೈರ್ಯವಿರಬೇಕು. ಗಾಯತ್ರಿ ಮಂತ್ರದಲ್ಲಿ ಹೇಳುವುದು ಇದೇ. “ಧಿಯೋ ನಹಃ ಪ್ರಚೋದಯಾತ್” ಅರ್ಥಾತ್ ಹೇ ತಾಯಿ ನನ್ನೊಳಗಿನ ಧಿ–ಶಕ್ತಿಯನ್ನು ಪ್ರಚೋದಿಸು ಎಂಬುದಾಗಿ ಆತ್ಮಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಯಾರನ್ನು ಕಾಯಬೇಕಿಲ್ಲ, ಅವಲಂಬಿಸಬೇಕಿಲ್ಲ, ಇದು ನಾವು ಗಳಿಸಿ ಕೊಳ್ಳಬೇಕಾದ ಅಂತಃಶಕ್ತಿ. ಇದು ನಮ್ಮೊಳಗಿನ ಜನರೇಟರ್. ಇದು ಯಾವಾಗಲೂ ಆನ್ ಆಗಿರಬೇಕು ಅಷ್ಟೇ. ನಮ್ಮ ಶಕ್ತಿ ಆರದಿರಲಿ, ಆತ್ಮವಿಶ್ವಾಸ ತುಂಬಿರಲಿ.

ಇದರ ಜೊತೆಗೆ ಆಗೊಮ್ಮೆ, ಈಗೊಮ್ಮೆ ಆತ್ಮಾವಲೋಕನ ಮಾಡಿಕೊಂಡು ಸಾಗಬೇಕು. ಇದು ನಮ್ಮ ಉನ್ನತಿಗೆ ಊರುಗೋಲಾಗುತ್ತದೆ. ಅರ್ಥಪೂರ್ಣ ಆತ್ಮಾವಲೋಕನ ಮಾಡಿಕೊಂಡವರು ಪರಿಪೂರ್ಣ ವ್ಯಕ್ತಿಗಳಾಗುತ್ತಾರೆ. ಇದನ್ನು ಮನಗಂಡು ಮನದ ನಿಯಂತ್ರಣ ಮಾಡಿಕೊಂಡು ಪರಿಶುದ್ಧರಾಗೋಣ. ‘ಮನ ಏವ ಮನುಷ್ಯ’ ಎಂಬಂತೆ, ಗುರುಗಳಿಂದ ನಾವು ಸ್ವಾಧ್ಯಾಯ, ಆತ್ಮಾವಲೋಕನದ ಶಿಸ್ತು, ಸಂಯಮ ಹಾಗೂ ಸತ್ ಚಿಂತನೆಗಳನ್ನು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಬಿರುದು, ಬಾವಲಿಗಳಿಗೆ, ಪ್ರಚಾರಗಳಿಗೆ, ಪ್ರಶಸ್ತಿಗಳಿಗೆ

ಆಸೆಪಡದೆ, ನಮ್ಮ ಕಾರ್ಯವನ್ನು ಶಿಸ್ತು, ಸತ್ಯ, ನಿಷ್ಠೆಯಿಂದ ಪರಿಪಾಲಿಸಬೇಕು. ಆಗಲೇ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದು ಆದರ್ಶ ಶಿಕ್ಷಕ ರಾಗಲು ಸಾಧ್ಯ. ಇದರಿಂದ ಸಿಗುವುದು ಪರಮಾನಂದ. ಇದಕ್ಕಿಂತ ಇನ್ನೇನುಬೇಕು. ಪ್ರತಿನಿತ್ಯವು ಗುರುವಾದವನು, ತಮ್ಮ ಸದ್ಗುರುಗಳನ್ನು ನೆನಪು ಮಾಡಿಕೊಂಡು ಅವರಿಗೆ ಗೌರವ ಪ್ರಣಾಮಗಳನ್ನು ಸಲ್ಲಿಸಬೇಕು. ಅದು ನಮ್ಮ ಕರ್ತವ್ಯವೂ ಹೌದು. ಇಂತಹವರ ಸಾಲಿನಲ್ಲಿ ಮೇರುವಿನಂತೆ ಕಾಣಿಸುವ ವ್ಯಕ್ತಿ ಎಂದರೆ ಭಾರತರತ್ನ ಸರ್ವಪಲ್ಲಿ ರಾಧಾಕೃಷ್ಣನ್ ರವರು. ಶ್ರೀಯುತರು ಭವ್ಯ ಭಾರತದ ಉಪರಾಷ್ಟ್ರಪತಿ ಯಾಗಿದ್ದಾಗ, ತಮ್ಮ ಶಿಷ್ಯರು ಜನ್ಮದಿನವನ್ನು ಆಚರಿಸಲು ಕೋರಿದಾಗ ಆ ದಿನವನ್ನು **'ಶಿಕ್ಷಕರ ದಿನಾಚರಣೆ'** ಯನ್ನಾಗಿ ಆಚರಿಸುವಂತೆ ಕರೆಕೊಟ್ಟರು. ಇಂದಿನ ವರೆಗೂ ಸೆಪ್ಟೆಂಬರ್ 5ರಂದು ಶಿಕ್ಷಕರ ದಿನಾಚರಣೆ ಯನ್ನು ಆಚರಿಸುತ್ತಿದ್ದೇವೆ. ಇದು ನಮ್ಮೆಲ್ಲರ ಸುಕೃತ ವೆಂದು ಭಾವಿಸಬೇಕು.

ಈ ಆಚರಣೆ ಬರೀ ಸಂಪ್ರದಾಯವಾಗದೆ ಶ್ರೀಯುತರ ಆದರ್ಶಗಳನ್ನು ಹಾಗೂ ಮಕ್ಕಳನ್ನು ಮುಂದಿನ ಜನಾಂಗದ ನಾಗರೀಕರನ್ನಾಗಿ ಪರಿವರ್ತಿಸುವ ಗುರುಗಳು ಎಂದು ಚೈತನ್ಯಶೀಲತೆ ಯನ್ನು ಮೈಗೂಡಿಸಿಕೊಂಡರೆ ಸಾರ್ಥಕ. ಶ್ರೀಯುತರ ಬಾಳು ನಮಗೇ ಆದರ್ಶವಾಗಲಿ, ಬೆಳಕಾಗಲಿ ಎಂದು ಆಶಿಸೋಣ.

ರಾಷ್ಟ್ರಕವಿ ಕುವೆಂಪುರವರು ತಿಳಿಸಿರುವಂತೆ "ಮನುಷ್ಯ ಮತ ವಿಶ್ವಪಥದತ್ತ ಸಾಗೋಣ" ಭವ್ಯ ಭಾರತದ ನಿರ್ಮಾಣಕ್ಕೆ ಯೋಜನಾಶೀಲರಾಗೋಣ. ಚಿಂತನಶೀಲರಾಗೋಣ.

ಸದ್ಗುರುವು ನಮ್ಮೆಲ್ಲರನ್ನು ಹರಸಲಿ, ಮೆರೆಸಲಿ. Nothing is impossible when you have faith and belief in yourself.


Little faith says, you can do it
More faith says, you will do it
Great faith says, yes, it is done.



◆ **ಎನ್. ಶ್ರೀನಿವಾಸಯ್ಯ**
7899318098

ಯುವ ಪ್ರತಿಭೆ

## ರೋಹಿತ್ ಭಾನುಪ್ರಕಾಶ್



**ಬೃ**ಹಚ್ಚರಣ ಸಮುದಾಯದ ಹಿರಿಯ ಮತ್ತು ಪ್ರಖ್ಯಾತ ಚಲನಚಿತ್ರ ನಿರ್ದೇಶಕ ನಿರ್ಮಾಪಕರಾದ ರಾಶಿ ಸಹೋದರರಲ್ಲಿ ಒಬ್ಬರಾದ ದಿ. ರಾಮನಾಥನ್ ಹಾಗೂ ಶ್ರೀಮತಿ ಕಲಾರವರ ಮಗಳು ಶ್ರೀಮತಿ ಶೈಲಜಾ ಮತ್ತು ಅಳಿಯ ಡಾ॥ ಭಾನುಪ್ರಕಾಶ್‌ರವರ ಮಗ ಚಿ. ರೋಹಿತ್ ಭಾನುಪ್ರಕಾಶ್‌ರವರು ಕನ್ನಡ ಚಲನಚಿತ್ರರಂಗದ ಬಹುಮುಖ ಯುವಪ್ರತಿಭೆ ಎಂದು ತಿಳಿಸಲು ಹರ್ಷಿಸುತ್ತೇವೆ. ಇದಕ್ಕೆ ಇನ್ನೊಂದು ಕಾರಣ ಹೇಳುವುದಾದರೆ ಪ್ರಖ್ಯಾತ ಕಲಾವಿದರಾದ ದಿ. ಕಲಾ ಸುಬ್ಬರಾಯರ ವಂಶದಲ್ಲಿ ಬಂದವರು ರೋಹಿತ್. ಪ್ರಸಿದ್ಧ ನಾಟಕಕಾರ ದಿ. ಎ.ಎಸ್. ಮೂರ್ತಿಯವರು ರೋಹಿತ್ ಅವರ ತಾಯಿಯ ಸೋದರ ಮಾವ. ಕನ್ನಡ ಚಲನಚಿತ್ರ ರಂಗದ ದಿಗ್ಗಜ ಶ್ರೀ ಎಸ್. ಶಿವರಾಂರವರು ಇವರ ಚಿಕ್ಕತಾತ.

ರೋಹಿತ್‌ರವರು "ಅಭಿನಯ ತರಂಗ" ಸಂಸ್ಥೆಯಲ್ಲಿ ಡಿಪ್ಲೊಮಾ, ಅನುಪಮ್ ಖೇರ್‌ರವರ "ಆಕ್ಟರ್ ಪ್ರಿಪೇರ್ಸ್" ಸಂಸ್ಥೆಯಲ್ಲಿ ಅಭಿನಯ ಮತ್ತು ನೃತ್ಯ ಕಲಿತಿದ್ದಾರೆ. ಇವರು ನಟಿಸಿರುವ ಕನ್ನಡ ಚಿತ್ರಗಳೆಂದರೆ ಪ್ರೀತಿ–ಪ್ರೇಮ, ಕಾಫಿ ವಿತ್ ಮೈ ವೈಫ್, ದಿಲ್ಖುಶ್, ದೃಶ್ಯ, ಕಿಸ್ಮತ್, ಕೆಂಪಾಪುರ ಕೋರ್ಟ್ ಕೇಸ್, ಸಾಹೇಬ, ಚೂರಿಕಟ್ಟೆ, ಫೇಸ್ ಟು ಫೇಸ್, ಕನ್ನಡ್ ಗೊತ್ತಿಲ್ಲ, ಶಿವಾಜಿ ಸೂರತ್ಕಲ್.

ಇವರು ನಟಿಸಿರುವ "ಸೀಸಾ" ಎಂಬ ತೆಲುಗು ಚಿತ್ರವು "ಅತೀ ಉದ್ದದ ದೃಶ್ಯ" ಹೊಂದಿದೆ ಎಂದು "ಗಿನ್ನಿಸ್ ರೆಕಾರ್ಡ್"ನಲ್ಲಿ ದಾಖಲೆಯಾಗಿದೆ.

ರೋಹಿತ್‌ರವರು ಅಭಿನಯವಲ್ಲದೆ ಸಹಾಯಕ ನಿರ್ದೇಶಕರಾಗಿ ಕನ್ನಡದ ಆಪ್ತರಕ್ಷಕ, ಆರಕ್ಷಕ, ದೃಶ್ಯ, ಶಿವಲಿಂಗ, ತಮಿಳಿನ ಕುಚೇಲನ್ ಮತ್ತು ಪುಲಿವೇಶಂ ಹಾಗೂ ತೆಲುಗಿನ ಕಥಾನಾಯಕುಡುವಿನಲ್ಲಿ ತಮ್ಮ ಪ್ರತಿಭೆ ಪ್ರದರ್ಶಿಸಿದ್ದಾರೆ. ಇದರೊಂದಿಗೆ ಕನ್ನಡದ "ಬದ್ಮಾಶ್" ಚಿತ್ರಕ್ಕೆ ಲೈನ್ ನಿರ್ಮಾಪಕರೂ ಆಗಿದ್ದಾರೆ.

"ಅಭಿನಯ ತರಂಗ" ಸಂಸ್ಥೆಯಲ್ಲಿ ಅಭಿನಯ ಮತ್ತು ಚಲನಚಿತ್ರ ತಯಾರಿಸುವ ಬಗ್ಗೆ ತರಗತಿ ನಡೆಸಿದ್ದಾರೆ. ಇದಲ್ಲದೆ ಸುಮಾರು ಹನ್ನೆರಡು ವರ್ಷಗಳಿಂದ ಹಲವಾರು ಕಾರ್ಟೂನ್, ಜಾಹಿರಾತು, ಟಿ.ವಿ. ಷೋ, ಸ್ಪೋರ್ಟ್ಸ್ ಷೋಗಳಿಗೆ ತಮ್ಮ ಧ್ವನಿಯನ್ನು ನೀಡಿದ್ದಾರೆ.

ಚಲನಚಿತ್ರ ಕ್ಷೇತ್ರವಲ್ಲದೆ ವಾಹನದಲ್ಲಿ "ಬ್ರೀಡಿ, ಸ್ಟೆಡಿ ಅಂಡ್ ಗೋ" ಎಂಬ ಆಹಾರ ವಿತರಣೆ (ಫುಡ್ ಟ್ರಕ್) ಯೋಜನೆಯನ್ನು ಇಬ್ಬರು ಸ್ನೇಹಿತರೊಂದಿಗೆ ನಡೆಸುತ್ತಿದ್ದಾರೆ.

ಸಂಘವು ಇಂತಹ ಹುಟ್ಟು ಕಲಾವಿದನಾದ ಚಿ॥ ರೋಹಿತ್ ಚಿತ್ರರಂಗದಲ್ಲಿ ಪ್ರವರ್ಧಮಾನಕ್ಕೆ ಬರಲೆಂದು ಹಾರೈಸುತ್ತದೆ.

◆ **ಲಲಿತಾ ರಮೇಶ್**
**9945199637**



# ಸಮತ್ವ ಪ್ರತಿಷ್ಠಾನ

ಸಂಘದ ಪೋಷಕರಾದ ಕಂಜಿರ ವಿದ್ವಾನ್ ಶ್ರೀ ಜಿ. ಗುರುಪ್ರಸನ್ನ ಮತ್ತು ಅವರ ಪತ್ನಿ ಶ್ರೀಮತಿ ಜಿ.ಡಿ. ಪಲ್ಲವಿ ಗುರುಪ್ರಸನ್ನರವರು ಬೆಂಗಳೂರಿನಲ್ಲಿ ಸಮತ್ವ ಪ್ರತಿಷ್ಠಾನ ಎಂಬ ಸಂಸ್ಥೆಯನ್ನು ಹುಟ್ಟುಹಾಕಿರುತ್ತಾರೆ. ಶ್ರೀಮದ್ ಭಗವದ್ಗೀತೆಯಲ್ಲಿ ಜಗದ್ಗುರುವಾದ ಶ್ರೀಕೃಷ್ಣ ಪರಮಾತ್ಮನು 'ಸಮತ್ವಂ ಯೋಗಮುಚ್ಚತೇ' ಮತ್ತು 'ಯೋಗಃ ಕರ್ಮಸು ಕೌಶಲಂ' ಎಂದು ಹೇಳಿದ್ದಾನೆ. ಆದ್ದರಿಂದ ಈ ಪ್ರತಿಷ್ಠಾನದ ಹೆಸರು ಸೂಚಿಸಿರುವುದು ಅತ್ಯಂತ ಸಮಂಜಸವಾಗಿದೆ.

ಸಮತ್ವ ಪ್ರತಿಷ್ಠಾನದ ಚಿಹ್ನೆ ಪರಿಕಲ್ಪನೆ ಚಿ॥ ಪ್ರಣವಿ ಗುರುಪ್ರಸನ್ನ ಅವರದ್ದು ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ 'ಸ' ಎಂಬ ಅಕ್ಷರ ಪ್ರಧಾನ ಹಾಗೂ ಮೂಲ. ಇದರ ಅರ್ಥ ತೈತ್ತರೀಯ ಉಪನಿಷತ್‌ನಲ್ಲಿ ಹೇಳಿರುವಂತೆ 'ರಸೋ ವೈ ಸಃ' ಅಂದರೆ ಭಗವಂತ. ಮೇಲೆ ಇರುವ ತಂಬೂರಿಯು ಶೃತಿ ಎಂದರೆ ವೇದ. ಇದಕ್ಕೆ ಆಧಾರ ಭಗವಂತ.

### ಇದರ ಮೂಲ ಉದ್ದೇಶಗಳು

* ವಿಶೇಷ ಮತ್ತು ಆಸಕ್ತಿದಾಯಕ ಏಕವ್ಯಕ್ತಿ ಪ್ರದರ್ಶನಗಳು ಮತ್ತು ಸಂಗೀತ ಕಚೇರಿಗಳು/ಉತ್ಸವಗಳನ್ನು ಆಯೋಜಿಸುವ ಮೂಲಕ ಎಲ್ಲಾ ರೀತಿಯ ಸಂಗೀತಗಳಿಗೆ, ಗಾಯನ, ವಾದ್ಯ ಮತ್ತು ತಾಳವಾದ್ಯಕ್ಕೆ ಸಮಾನ ಒತ್ತು ನೀಡುವುದು.

* ಸ್ಥಾಪಿತ ಸಾಂಪ್ರದಾಯಿಕ / ಸಾಂಪ್ರದಾಯಿಕ ಮತ್ತು ನವೀನ ಶೈಲಿಗಳ ಉಚ್ಚಾರಣೆಯೊಂದಿಗೆ ಸಂಗೀತ ಕಛೇರಿಗಳ ತಂಡವನ್ನು ನಿರ್ಮಿಸುವ ಉದ್ದೇಶದಿಂದ ಸಂಗೀತದಲ್ಲಿ ಶಿಕ್ಷಣವನ್ನು ಒದಗಿಸುವುದು.



* ಪೌರಾಣಿಕ ಪ್ರದರ್ಶಕರಿಂದ ಹಿಡಿದು ಪ್ರಾಯೋಗಿಕ (ಪ್ರದರ್ಶನ) ಸಂಗೀತದ ಕಲೆಯ ಸಂಕೀರ್ಣತೆಗಳನ್ನು ಕೇಳುಗರಿಗೆ ಮತ್ತು ಸಂಗೀತ ವಿದ್ಯಾರ್ಥಿಗಳಿಗೆ ಎತ್ತಿ ತೋರಿಸುವವರಿಗೆ ಉಪನ್ಯಾಸ–ಪ್ರದರ್ಶನಗಳು/ಸಚಿತ್ರ ಮಾತುಕತೆ/ಕಾರ್ಯಾಗಾರಗಳನ್ನು ಆಯೋಜಿಸುವುದು.

* ಮುಂದಿನ ಪೀಳಿಗೆಯ ನಡುವೆ ಶಾಸ್ತ್ರೀಯ ಸಂಗೀತವನ್ನು ಪ್ರೋತ್ಸಾಹಿಸಲು ಮತ್ತು ಉತ್ತೇಜಿಸಲು ಸೆಮಿನಾರ್‌ಗಳು, ಚರ್ಚೆಗಳು, ಅಧ್ಯಯನ ಗುಂಪುಗಳು ಮತ್ತು ಅಂತಹುದೇ ಚಟುವಟಿಕೆಗಳನ್ನು ಆಯೋಜಿಸುವುದು.

* ಮುಂದಿನ ಪೀಳಿಗೆಯ ಮತ್ತು ಮಹತ್ವಾಕಾಂಕ್ಷಿ ಸಂಗೀತಗಾರರು ಆಸಕ್ತಿದಾಯಕ ಮತ್ತು ಸವಾಲಿನ ವಿಷಯಗಳನ್ನು ತೆಗೆದುಕೊಳ್ಳಲಿ ಮತ್ತು ಅವರ ಪ್ರತಿಭೆಯನ್ನು ಪ್ರದರ್ಶಿಸಿ ಮತ್ತು ಹೆಚ್ಚಿನ ಕಲಿಕೆಯನ್ನು ತೀವ್ರಗೊಳಿಸಲಿ.

* ತಂತ್ರಜ್ಞಾನವನ್ನು ಹತೋಟಿಗೆ ತರಲು ಮತ್ತು ಪ್ರದರ್ಶಕರು ಮತ್ತು ಕೇಳುಗರಿಗೆ ಸಹಾಯ ಮಾಡುವಂತಹದನ್ನು ಬಳಸಲು ಸಮ ತಿಳುವಳಿಕೆಯನ್ನು ನಿರ್ಮಿಸುವುದು.

* ಶಾಸ್ತ್ರೀಯ ಸಂಗೀತದ ಮೂಲಕ ಭಾರತೀಯ ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ಎತ್ತಿಹಿಡಿಯುವ, ಸಮುದಾಯಕ್ಕೆ ಸೇವೆ ಸಲ್ಲಿಸುತ್ತಿರುವ ಸಮುದಾಯಕ್ಕೆ ಇತರ ಸಂಘಟನೆಗಳು/ಎನ್‌ಜಿಓಗಳನ್ನು ವಿಸ್ತರಿಸಲು ಅಥವಾ ಬೆಂಬಲಿಸಲು.

ವಿದ್ವಾನ್ ಶ್ರೀ ಗುರುಪ್ರಸನ್ನ ದಂಪತಿಗಳೊಂದಿಗೆ ಶ್ರೀ ಚಿದಾನಂದ ಮತ್ತು ಶ್ರೀಮತಿ ಸೌಮ್ಯ ರಾಜೇಶ್‌ರವರು ಸದಸ್ಯರಾಗಿದ್ದಾರೆ. ಸಮತ್ವ ಸಂಸ್ಥೆಯ ಸಲಹಾ ಮಂಡಳಿಗೆ ಗಾನಕಲಾಭೂಷಣ ವಿದ್ವಾನ್ ಆರ್.ಕೆ. ಪದ್ಮನಾಭ್, ಸಂಗೀತ ಸಾಮ್ರಾಟ್ ವಿದ್ವಾನ್ ಮೈಸೂರು ನಾಗರಾಜ್ ಮತ್ತು ವಿದ್ವಾನ್ ಡಾ॥ ಮೈಸೂರು ಮಂಜುನಾಥ್ ಹಾಗೂ ಲಯ ವಾದ್ಯ ವಿದ್ವಾನ್ ಅರುಣ್‌ಕುಮಾರ್‌ರವರು ಕೈ ಜೋಡಿಸಿರುವುದು ಸಂಸ್ಥೆಗೆ ಒಂದು ವರದಾನವಾಗಿದೆ.

ಶ್ರೀ ಗುರುಪ್ರಸನ್ನರವರು ಬೃಹಚ್ಚರಣ ಸಂಘದ ಕಾರ್ಯಕಾರಿ ಸಮಿತಿ ಹಿರಿಯ ಸದಸ್ಯ ಹಾಗೂ ಪೋಷಕರಾದ ಶ್ರೀ ಗುಂಡಪ್ಪ ದಂಪತಿಗಳ ಸುಪುತ್ರ. ಬೃಹಚ್ಚರಣ ಸಂಘವು ವಿದ್ವಾನ್ ಶ್ರೀ ಗುರುಪ್ರಸನ್ನ ದಂಪತಿಗಳ ಈ ಬೃಹತ್ ಕಾರ್ಯಕ್ಕೆ ಅಭಿನಂದಿಸಿ, ಶುಭ ಹಾರೈಸುತ್ತದೆ.

◆ ಆರ್.ರಮೇಶ್



# ಸಹಬಾಳ್ವೆ

ಅದೊಂದು ಹಳ್ಳಿಯ ಶಾಲೆ. ತರಗತಿಯ ಎಲ್ಲ ವಿದ್ಯಾರ್ಥಿಗಳು ಬಹಳ ಅನ್ಯೋನ್ಯವಾಗಿ ಒಂದೇ ಕುಟುಂಬದವರಂತೆ ಇದ್ದವರು. ಅದೇನಾಯ್ತೋ, ಇದ್ದಕ್ಕಿದ್ದಂತೆ ಮೇಲುಕೀಳುಗಳ ಮನಸ್ತಾಪ ಪ್ರಾರಂಭವಾಗಿ, ತರಗತಿಯ ವಿದ್ಯಾರ್ಥಿಗಳಲ್ಲಿ ಮೂರು ನಾಲ್ಕು ಗುಂಪುಗಳಾದವು. ಆ ಗುಂಪುಗಳಲ್ಲಿನ ವಿದ್ಯಾರ್ಥಿಗಳ ನಡುವೆ ಆಗಾಗ ಘರ್ಷಣೆ, ಜಗಳಗಳಾಗಲು ಪ್ರಾರಂಭವಾಯಿತು. ಇದನ್ನು ಗಮನಿಸಿದ ತರಗತಿಯ ಉಪಾಧ್ಯಾಯರಿಗೆ, ಇದನ್ನು ಹೇಗಾದರೂ ನಿಯಂತ್ರಿಸಿ ಮಕ್ಕಳಲ್ಲಿ ಪ್ರೀತಿ, ಸಾಮರಸ್ಯ ಮತ್ತೆ ತರುವ ಬಗ್ಗೆ ಚಿಂತಿಸತೊಡಗಿದರು.

ಒಂದು ದಿನ ಎಲ್ಲ ವಿದ್ಯಾರ್ಥಿಗಳನ್ನು ಶಾಲೆಯ ಪಕ್ಕದಲ್ಲಿದ್ದ ಕೆರೆಯ ಅಂಗಳಕ್ಕೆ ಕರೆದುಕೊಂಡು ಹೋದರು. ಮಕ್ಕಳನ್ನು ಕುರಿತು, ತಮ್ಮ ಕೈಲಾದಷ್ಟು ಕೆರೆಯ ಜೇಡಿಮಣ್ಣನ್ನು ಶಾಲೆಯ ಆವರಣಕ್ಕೆ ತರುವಂತೆ ತಿಳಿಸಿದರು. ಎಲ್ಲ ಮಕ್ಕಳೂ ಬಹಳ ಖುಷಿಯಿಂದ ಜೇಡಿಮಣ್ಣು ಹೊತ್ತು ಶಾಲೆಯ ಅಂಗಳಕ್ಕೆ ತಂದರು. ಉಪಾಧ್ಯಾಯರು ಆ ಹಸಿ ಜೇಡಿಮಣ್ಣಿನಿಂದ ಸುಮಾರು ಅರ್ಧ, ಅರ್ಧ ಕೆ.ಜಿ ತೂಕದ ಉಂಡೆಗಳನ್ನು ಮಾಡಿ ಬಿಸಿಲಿನಲ್ಲಿ ಒಣಗಲು ಇಡುವಂತೆ ಸೂಚಿಸಿದರು. ಮಕ್ಕಳಿಗೆ ಮತ್ತಷ್ಟು ಖುಷಿಯಾಗಿ ನೂರಾರು ಮಣ್ಣಿನ ಉಂಡೆಗಳನ್ನು ತಯಾರು ಮಾಡಿ, ಬಿಸಿಲಿನಲ್ಲಿ ಒಣಗಲು ಸಾಲಾಗಿ ಜೋಡಿಸಿ ಇಟ್ಟರು. ಜೇಡಿಮಣ್ಣಿನ ಉಂಡೆಗಳನ್ನು ಉತ್ಸಾಹದಿಂದ ತಯಾರು ಮಾಡಿದ ಮಕ್ಕಳಿಗೆ ಇದನ್ನು ತಯಾರು ಮಾಡಿದ್ದಾದರೂ ಏಕೆ, ಇದರ ಉಪಯೋಗ ಏನು? ಎಂಬ ಕುತೂಹಲ ಹೆಚ್ಚಾಗಿ, ಉಪಾಧ್ಯಾಯರಲ್ಲಿ ಪ್ರಶ್ನೆ ಮಾಡಿದರು. ಪ್ರತಿಯಾಗಿ ಉಪಾಧ್ಯಾಯರು, ಮಣ್ಣಿನ ಉಂಡೆಗಳು ಒಂದು ವಾರ ಬಿಸಿಲಿನಲ್ಲಿ ಚನ್ನಾಗಿ ಒಣಗಿ ಗಟ್ಟಿಯಾಗಲಿ, ನಂತರ ಅವುಗಳನ್ನು ಏನು ಮಾಡಬೇಕೆಂಬುದನ್ನು ತಿಳಿಸುತ್ತೇನೆ ಎಂದು ತಿಳಿಸಿದರು.

ಒಂದು ವಾರ ಕಳೆದ ನಂತರ ತರಗತಿಯ ಎಲ್ಲ ವಿದ್ಯಾರ್ಥಿಗಳನ್ನು ಮಣ್ಣಿನ ಉಂಡೆಗಳು ಇದ್ದಲ್ಲಿಗೆ ಉಪಾಧ್ಯಾಯರು ಕರೆತಂದರು. ನಂತರ ಎಲ್ಲ ವಿದ್ಯಾರ್ಥಿಗಳಿಗೂ ಒಂದೊಂದು ಕೈಚೀಲ ಕೊಟ್ಟು, ನೀವು ನಿಮ್ಮ ತರಗತಿಯಲ್ಲಿ ಇರುವ ಯಾವ ಯಾವ ವಿದ್ಯಾರ್ಥಿಗಳನ್ನು ದ್ವೇಷಮಾಡಿ ಜಗಳವಾಡುತ್ತೀರೋ ಅವರ ಹೆಸರನ್ನು ಒಂದೊಂದು ಮಣ್ಣಿನ ಉಂಡಯ ಮೇಲೆ ಬರೆದು ನಿಮ್ಮ ಬಳಿ ಇರುವ ಚೀಲಕ್ಕೆ ಹಾಕಿ ಇಟ್ಟುಕೊಳ್ಳಿ ಎಂದರು. ಬಹುತೇಕ ವಿದ್ಯಾರ್ಥಿಗಳು ತಮಗೆ ಯಾವ ಯಾವ ಸಹಪಾಠಿಯ ಮೇಲೆ ದ್ವೇಷ, ಕೋಪ ಇತ್ತೋ, ಅವರುಗಳ ಹೆಸರನ್ನು ಮಣ್ಣಿನ ಉಂಡೆಗಳ ಮೇಲೆ ಬರೆದರು. ಕೆಲವರು ಎರಡು, ನಾಲ್ಕು, ಐದು, ಏಳು ಎಂಟು ಉಂಡೆಗಳನ್ನು ತಮ್ಮ ಚೀಲದಲ್ಲಿ ಹಾಕಿ ಇಟ್ಟುಕೊಂಡರು. ಒಂದೆರಡು ವಿದ್ಯಾರ್ಥಿಗಳು ಮಾತ್ರ ಯಾವುದೇ ಮಣ್ಣಿನ ಉಂಡೆಗಳನ್ನು ತಮ್ಮ ಚೀಲಕ್ಕೆ ಹಾಕದೆ, ಖಾಲಿ ಚೀಲವನ್ನು ಮಾತ್ರ ಇಟ್ಟುಕೊಂಡರು.

ನಂತರ ಉಪಾಧ್ಯಾಯರು ಹೇಳಿದ್ದು ಹೀಗೆ....!

ವಿದ್ಯಾರ್ಥಿಗಳೇ ನೀವು ಚೀಲದಲ್ಲಿ ಹಾಕಿ ಇಟ್ಟುಕೊಂಡಿರುವ ಮಣ್ಣಿನ ಉಂಡೆಗಳನ್ನು ಪ್ರತಿದಿನ ಶಾಲೆಗೆ ಬರುವಾಗ ಅದನ್ನು ಹೊತ್ತು ತರಬೇಕು, ಮತ್ತೆ ಮನೆಗೆ ತೆಗೆದುಕೊಂಡು ಹೋಗಿ ಮರುದಿನ ಮತ್ತೆ ಶಾಲೆಗೆ ಬರುವಾಗ ಹೊತ್ತು ತರಬೇಕು. ಈ ಕೆಲಸವನ್ನು ನಾನು ಸಾಕು ನಿಲ್ಲಿಸಿ ಎನ್ನುವವರೆಗೂ ಪ್ರತಿದಿನ ಮಾಡಬೇಕು ಎಂಬ ಷರತ್ತು ವಿಧಿಸಿದರು. ಹೆಚ್ಚು ಹೆಚ್ಚು ಮಣ್ಣಿನ ಉಂಡೆಗಳನ್ನು ಚೀಲಕ್ಕೆ ತುಂಬಿಸಿಕೊಂಡ ವಿದ್ಯಾರ್ಥಿಗಳಿಗೆ ಆಗ ತಲೆನೋವಿನ ಪರಿಸ್ಥಿತಿಯ ಅರಿವಾಯಿತು. ಖಾಲಿ ಚೀಲ ಇಟ್ಟುಕೊಂಡಿದ್ದ ವಿದ್ಯಾರ್ಥಿಗಳಿಗೆ ಸಂತೋಷವಾಯಿತು. ಕೆಲವು ವಿದ್ಯಾರ್ಥಿಗಳಿಗೆ, ದಿನ ಕಳೆದಂತೆ ಮಣ್ಣಿನ ಉಂಡೆಗಳ ಭಾರ ಹೆಚ್ಚಾಗಿ, ಒಂದೊಂದೇ ಮಣ್ಣಿನ ಉಂಡೆಗಳನ್ನು ಚೀಲದಿಂದ ಹೊರತೆಗೆದು ಎಸೆಯಲು ಪ್ರಾರಂಭ ಮಾಡಿ, ಭಾರವನ್ನು ಕಡಿಮೆ ಮಾಡಿಕೊಂಡರು. ಈ ವಿಚಾರ ಉಪಾಧ್ಯಾಯರಿಗೆ ಹೇಗೋ ತಿಳಿಯಿತು. ಮತ್ತಷ್ಟು ದಿನ ಕಳೆದಂತೆ ಎಲ್ಲ ವಿದ್ಯಾರ್ಥಿಗಳ ಚೀಲದಲ್ಲಿ ಮಣ್ಣಿನ ಉಂಡೆಗಳು ಇಲ್ಲದೆ, ಖಾಲಿಯಾದ ವಿಷಯ ಉಪಾಧ್ಯಾಯರಿಗೆ ತಿಳಿಯಿತು. ಆಗ ಮಣ್ಣಿನ ಉಂಡೆಗಳ ಗುಟ್ಟು ಏನೆಂದು ಉಪಾಧ್ಯಾಯರು ವಿವರಿಸಿದ್ದು ಹೀಗೆ.

ಮಕ್ಕಳೇ, ನೀವು ಸಮಾಜದಲ್ಲಿ ಯಾರೊಂದಿಗೆ ಹೆಚ್ಚು ಕೋಪ, ದ್ವೇಷ ಸಾಧಿಸುತ್ತೀರೋ, ಆಗ ಹೆಚ್ಚು ಹೆಚ್ಚು ಭಾರ ಹೊರುವ ಪರಿಸ್ಥಿತಿ ಎದುರಾಗುವುದು ಖಚಿತ. ಹೇಗೆ, ಯಾರನ್ನೂ ದ್ವೇಷ ಮಾಡದ ಕೆಲವು ವಿದ್ಯಾರ್ಥಿಗಳು ಖಾಲಿ ಚೀಲ ಹೊತ್ತು ನೆಮ್ಮದಿಯಿಂದ ಇದ್ದರು ಎಂಬ ಅನುಭವವನ್ನು ನೀವು ನೋಡಿದಿರಿ. ಹೆಚ್ಚು ದ್ವೇಷಿಸುವವರು ಹೆಚ್ಚಾದ ಭಾರವನ್ನು ಹೊರಲೇಬೇಕು ಎಂಬ ಸಂದೇಶ ತಿಳಿಸಲು ನಾನು ಈ ರೀತಿಯ ಪ್ರಯೋಗ ಮಾಡಬೇಕಾಯಿತು. ಈ ಪ್ರಯತ್ನದಿಂದ ದ್ವೇಷ, ಅಸೂಯೆ, ಕೋಪ ಎಂಬುದು ದೇಹಕ್ಕೆ, ಮನಸ್ಸಿಗೆ ಎಷ್ಟೊಂದು ಭಾರವಾಗುತ್ತದೆ ಎಂಬ ಅನುಭವ ಕಣ್ಣಾರೆ ಕಂಡಿದ್ದೀರಿ. ಹಾಗಾಗಿ ಇನ್ನು ಮುಂದೆ ಯಾರನ್ನೇ ಆಗಲಿ ದ್ವೇಷ ಮಾಡುವುದನ್ನು ಬಿಟ್ಟು ಎಲ್ಲರೊಂದಿಗೆ ಸಂತೋಷದ ಸಹಬಾಳ್ವೆ ನಡೆಸುವುದನ್ನು ಕಲಿಯಿರಿ ಎಂಬುದಾಗಿ ತಿಳಿಸಿದರು. ಗುಂಪು ಕಟ್ಟಿಕೊಂಡು ಜಗಳ, ದ್ವೇಷವನ್ನು ಸಾಧಿಸುತ್ತಿದ್ದ ವಿದ್ಯಾರ್ಥಿಗಳಿಗೆ ತಮ್ಮ ತಪ್ಪಿನ ಅರಿವಾಗಿ, ಸಹಬಾಳ್ವೆ, ಪ್ರೀತಿ, ಸಂತೋಷದಿಂದ ಇರುವಂತಾಯಿತು.

ನಲ್ವಾಗ್ದು.

◆ ವಿ.ಎಸ್. ಮಣಿ

# ಸತ್ತ ಮೇಲೆ ಎತ್ತ?

**ಮೊ**ನ್ನೆ ನಮ್ಮ ಸುಲೇಮಾನ್ ಒಂದು ಪ್ರಶ್ನೆ ಕೇಳಿದ. "ಭೂಮಿಯಲ್ಲಿ ಸತ್ತವರು ಸ್ವರ್ಗದಲ್ಲೋ ನರಕದಲ್ಲೋ ಹುಟ್ಟುತ್ತಾರೆ ಎನ್ನುತ್ತೀರಿ. ಅಲ್ಲಿ ಸತ್ತವರು ಎಲ್ಲಿ ಹುಟ್ಟುತ್ತಾರೆ? ಇದು ಕೇಳಬೇಕಾದ ಪ್ರಶ್ನೆಗೆ ಉತ್ತರಗೊತ್ತಿದ್ದರೆ, ಉತ್ತರಿಸಬೇಕಾದ ಪ್ರಶ್ನೆ.

ಹಿಂದುಗಳು, ಜೈನರು ಮತ್ತು ಬೌದ್ಧರು ನಾವು ವಾಸ ವಾಗಿರುವ ಮರ್ತ್ಯವನ್ನು "ಕರ್ಮಭೂಮಿ" ಎನ್ನುತ್ತಾರೆ. ಸ್ವರ್ಗ, ನರಕ ಎರಡನ್ನೂ "ಭೋಗ ಭೂಮಿ" ಎಂದು ಕರೆಯುತ್ತಾರೆ. ಮರ್ತ್ಯದಲ್ಲಿರುವವರು ಎರಡು ರೀತಿಯ ಕರ್ಮಗಳನ್ನು ಮಾಡುತ್ತಾರೆ. ಒಂದು ಒಳ್ಳೆಯ ಕರ್ಮ ಅಥವಾ ಪುಣ್ಯ, ಇನ್ನೊಂದು ಕೆಟ್ಟ ಕರ್ಮ ಅಥವಾ ಪಾಪ. ಈ ಎರಡು ಕರ್ಮಗಳ ಫಲವನ್ನು ಮಾಡಿದ ನಾವು ಅನುಭೋಗಿಸಿಯೇ ತೀರಬೇಕು. ಪುಣ್ಯದ ಫಲವನ್ನು ಸ್ವರ್ಗದಲ್ಲಿಯೂ ಪಾಪದ ಫಲವನ್ನು ನರಕದಲ್ಲಿಯೂ ಅನುಭೋಗಿಸಬೇಕಾದ್ದರಿಂದ ಅವು ಎರಡೂ ಭೋಗ ಭೂಮಿಗಳು.

ಮರ್ತ್ಯದಲ್ಲಿ ಪ್ರಾಣಿಗಳ ಆಯಸ್ಸಿಗೆ ಮಿತಿ ಇರುವ ಹಾಗೆ ಸ್ವರ್ಗ ನರಕಗಳಲ್ಲಿಯೂ ಮಿತಿ ಉಂಟು. ಮರ್ತ್ಯದಿಂದ ಕಟ್ಟಿ ಕೊಂಡು ಹೋದ ಕರ್ಮದ ಫಲವನ್ನು ಅಲ್ಲಿ ಅನುಭವಿಸಿಯಾದ ಮೇಲೆ ಅಲ್ಲಿನ ಆಯುಷ್ಯ ಮುಗಿದು ದೇಹವು ಅಲ್ಲಿಂದ ಪುನಃ ಕರ್ಮಭೂಮಿಗೆ ಹಿಂದಿರುಗುತ್ತದೆ.

**"ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ"**

ಎನ್ನುವ ಮಾತು ನರಕದಲ್ಲಿ ಪಾಪ ಕ್ಷಮ ಮಾಡಿ ಕೊಂಡವರಿಗೂ ಅನ್ವಯಿಸುತ್ತದೆ.

ಹೀಗೆ ಇಲ್ಲಿ ಪುಣ್ಯ ಕರ್ಮವನ್ನೋ ಪಾಪಕರ್ಮವನ್ನು ಮಾಡುವುದು ಅದರ ಫಲವನ್ನು ಅನುಭೋಗಿವುದಕ್ಕಾಗಿ ಸ್ವರ್ಗವೋ? ನರಕವೋ? ಅಲ್ಲಿ ಕಟ್ಟಿಕೊಂಡು ಹೋದ ಕರ್ಮಫಲದ ಬುತ್ತಿ ತೀರಿದೊಡನೆ ಮತ್ತೆ ಭೂಮಿಯಲ್ಲಿ ಹುಟ್ಟುವುದು– ಶಂಕರಾಚಾರ್ಯರು ಹೇಳಿದ ಹಾಗೆ "ಪುನರಪಿ ಜನನಂ, ಪುನರಪಿ ಮರಣಂ" ಇದನ್ನು ಸಂಸಾರ ಎಂದು ಕರೆಯುತ್ತಾರೆ. ಇದರಿಂದ ತಪ್ಪಿಸಿಕೊಂಡಾಗ ಅದು ಮುಕ್ತಿ. ಇಲ್ಲಿ ಗಮನಿಸಬೇಕಾದ್ದು ಇನ್ನೊಂದು ಉಂಟು. ಪುಣ್ಯಪಾಪದ ಫಲವನ್ನು ಅನುಭವಿಸುವುದಕ್ಕೆ ಸ್ವರ್ಗಕ್ಕೆ ಹೋಗಬೇಕಾದ್ದಿಲ್ಲ. ನರಕಕ್ಕೆ ಹೋಗಬೇಕಾದ್ದಿಲ್ಲ. 'ಅತ್ಯುತ್ಕಟೈಃ ಪುಣ್ಯ–ಪಾಪೈಃ ಇ ಹೈವ ಫಲಮಶ್ನುತೇ' (ಅತಿ ಉತ್ಕಟದಿಂದ ಪುಣ್ಯ ಪಾಪಗಳಿಂದ ಇಲ್ಲಿಯೇ ಅವುಗಳ ಫಲವನ್ನು ಅನುಭವಿಸುತ್ತಾನೆ) ಎಂಬುದನ್ನು ಅಶ್ವತ್ಥಾಮನು ಇನ್ನೂ ಬದುಕಿರುವಾಗಲೇ ತಾನು ಕಂಡುಕೊಂಡ. ಅವಷ್ಟು ಅಲ್ಲದಿದ್ದರೂ ನಮಗೂ ಇದರ ಅರಿವು ಆಗಾಗ್ಗೆ ಕೊಂಚ ಕೊಂಚ ಉಂಟಾಗುತ್ತದೆ.

◆ **ಕಿತ್ತಗಾನಹಳ್ಳಿ ಶ್ರೀನಿವಾಸಯ್ಯ**

# ಚಾಮುಂಡೇಶ್ವರಿ ಪ್ರಾರ್ಥನೆ

**ರಾಗ : ವೇದಿಕಾ ಲಲತ್ ತಾಳ : ಝಪ್‌ತಾಲ್**

**ಸ್ಥಾಯಿ**

**ಮನಸುಬುದ್ಧಿಗತೀತೆ, ಗಿರಿರಾಜ ಸುತೆ ಮಾತೆ ।**
**ಎನಗೆ ನೀಡೊರಬಂದೇ, ನಿನ್ನನೇ ನೆನೆವಂತೆ ॥**

**ಅಂತರ**

**ದಿನ ನಿಮಿಷ ಕೊಂದೂಂದು, ಬಯಸಿ ನಾ ಬಳಲಿದೆನು ।**
**ಹಣದಾಸೆಗಾಗಿನಾ, ನನ್ನನೇ ಮಾರಿದೆನು ॥**
**ಕ್ಷಣಿಕವಾದೀ ವಿಷಯ, ಶರಧಿಯೊಳು ಮುಳುಗಿದೆನು ।**
**ಜನನಿ ಓ ಚಾಮುಂಡಿ, ಬಿಡಿಸೆನ್ನ ಬಂಧವನು ॥ 1 ॥**

**ನಾನು ಅರೆಂಬರಿವ, ಮರೆಯದಂತಿರಿಸಮ್ಮ ।**
**ನಾನು ನಿನ್ನೊಳು ಬೆರೆಯೆ, ಬೇರಿಲ್ಲ ನಾನಮ್ಮ ॥**
**ನಾನು ನದಿಯಂತ್ಹರಿದು, ಶರಿಧಿ ಸೇರಿದೆನಮ್ಮ ।**
**ನಾನೂ ನೀನಾದ ಮೇ–। ಲೀ ಜಗವೇ ನಾನಮ್ಮ ॥ 2 ॥**

**ನಿನ್ನುಳಿದು ಬೇರೇನು, ನಾನೋಡದಿರಿಸಮ್ಮ ।**
**ನಿನ್ನ ಕೀರ್ತಿಯು ಕಿವಿಯು ಕೇಳುತಿರಲಮ್ಮ ॥**
**ನಿನ್ನ ಸ್ತುತಿಯನೆ ಜಿಹ್ವೆ ಮಾಡುತಿರಲಮ್ಮ ।**
**ನಿನ್ನ ಕರುಣೆಯ ಸಾಕು ಉರಗಾಚಲನಿಗಮ್ಮ ॥ 3 ॥**


**ಪಂಡಿತ್ ಶೇಷಾದ್ರಿ ಗವಾಯಿ**

ಶ್ರದ್ಧಾಂಜಲಿ

# ನಮ್ಮನ್ನಗಲಿದ ನಮ್ಮವರು



* **ಸುಮಿತ್ರಮ್ಮ ಅನಂತಕೃಷ್ಣ**, 11–08–19 ಸಂಘದ ಶ್ರೀ ಎಸ್.ಎ. ಮಂಜುನಾಥ್ ಅವರ ತಾಯಿ.



* **ಡಾ. ಎಂ.ಎಸ್. ಶ್ರೀಕಂಠಯ್ಯ** 22–08–19(83) ಸಂಘದ ಸದಸ್ಯ ಶ್ರೀ ಡಾ.ಎಂ.ಎಸ್. ಶಶಿಕುಮಾರ್ ಅವರ ತಂದೆ.

* ಸಂಘದ ಸದಸ್ಯೆ ಶ್ರೀಮತಿ ಪಾರ್ವತಿ ದೇವಿ ಅವರ ಪುತ್ರ **ಎಂ.ಎಸ್. ಪ್ರಸಾದ್** (52 ವರ್ಷ) 15–09–19

**ಅಂಚೆಪೆಟ್ಟಿಗೆ**



ಬೃಹಚ್ಚರಣ ಪತ್ರಿಕೆಯ ಸಂಪಾದಕರಾದ ಶ್ರೀ ನಟರಾಜ್ ಮತ್ತು ಸಂಪಾದಕ ಮಂಡಳಿಯ ಸದಸ್ಯರಿಗೆ.

ಏಪ್ರಿಲ್–ಜೂನ್ 2019ರ "ಬೃಹಚ್ಚರಣ" ಸಂಚಿಕೆ ಕೈ ಸೇರಿದೆ.

ಶ್ರೀಮತಿ ಲಲಿತಾ ರಮೇಶ್‌ರವರ ಲೇಖನ ಗಳಾದ ಶ್ರೀ ಶಂಕರ ಜಯಂತಿ ಕಾರ್ಯಕ್ರಮದ ವಿವರಗಳು, 2018–19ರ ಸರ್ವ ಸದಸ್ಯರ ಸಭೆಯ ಪಕ್ಷಿನೋಟ, ಮಹಾಭಾರತದಲ್ಲಿ ಶಂಖದ ಮಹತ್ವ ಸುಂದರವಾಗಿ ವಿವರಿಸಲಾಗಿದೆ.

ಶ್ರೀಮತಿ ಲಲಿತಮ್ಮ ಚಂದ್ರಶೇಖರ್ ಅವರು ಬರೆದ ಉಮಾ ಚಂದ್ರಶೇಖರ ಅವರ ನೆನಪಿನ ಲೇಖನ ಉತ್ತಮವಾಗಿ ಮೂಡಿಬಂದಿದೆ.

ಶ್ರೀಮತಿ ಜಿ.ಪಿ. ಲಕ್ಷ್ಮೀದೇವಿಯವರ ಕಗ್ಗದ ತಾತ್ಪರ್ಯದ ಲೇಖನವಂತೂ ಅದ್ಭುತ. ಘನ ತತ್ವವೊಂದಕ್ಕೆ ದಿನರಾತ್ರಿ ಮನಸೋತು... (ಇದು ನನಗೆ ಮೆಚ್ಚಿಗೆಯಾದ ಕಗ್ಗವೂ ಹೌದು) ಇದರ ವಿಶ್ಲೇಷಣೆ ಅನೇಕ ಶ್ಲೋಕಗಳು, ಕೀರ್ತನೆ ಗಳೊಂದಿಗೆ ಮನಮುಟ್ಟುವಂತಿದೆ. ಶ್ರೀಮತಿ ಲಕ್ಷ್ಮೀದೇವಿ ಯವರಿಗೆ ಧನ್ಯವಾದಗಳು.

ಎಂದಿನಂತೆ, ಶ್ರೀ ಆರ್.ರಮೇಶ್ ಅವರ 'ನಮ್ಮವರು' ಲೇಖನದಲ್ಲಿ ಶ್ರೀ ಸರ್ಜಾಪುರ ವೆಂಕಟಾಚಪತಿಯವರ ಪರಿಚಯದ ಲೇಖನ, ನಮ್ಮಲ್ಲಿನ ಅನೇಕ ಮಹಾನುಭಾವರ ಬಗ್ಗೆ ಸಮುದಾಯದ ಸದಸ್ಯರಿಗೆ ಪರಿಚಯ ಮಾಡಿಕೊಡುವ ಆಲೋಚನೆ ಉತ್ತಮವಾಗಿದೆ.

ಶ್ರೀಮತಿ ಗಾಯತ್ರಿ ಶೇಷಾಚಲ ರವರ ಡಾ. ಕೇಶವ ಮೂರ್ತಿ **'ಕೇಫ'** ಪರಿಚಯ, ತಮ್ಮದೇ ಆದ ಶೈಲಿಯಲ್ಲಿ ಸುಂದರವಾಗಿ ಮೂಡಿಬಂದಿದೆ.

ಈ ಸಂಚಿಕೆಯಲ್ಲಿನ ಎಲ್ಲ ಲೇಖನಗಳು ಉತ್ತಮವಾಗಿದೆ.

ಲೇಖಕರಿಗೆ, ಸಂಪಾದಕ ಮಂಡಲಿಯವರಿಗೆ ಅಭಿನಂದನೆ ಗಳೊಂದಿಗೆ, ಧನ್ಯವಾದಗಳು.

◆ ವಿ.ಎಸ್.ಮಣಿ

## ಜನನ



ಸಂಘದ ಪೋಷಕ ಸದಸ್ಯೆ ಶ್ರೀಮತಿ ಕೆ.ಎಲ್. ಶಾಂತಾರವರ ಪುತ್ರಿ ಚಿ॥ಸೌ॥ ಸುಹಾಸಿನಿ ಮತ್ತು ಚಿ॥ ಅಜೇಯ್ ರವರಿಗೆ ದಿನಾಂಕ 07–08–19ರಂದು ಹೆಣ್ಣುಮಗು ಜನನ ವಾಗಿರುತ್ತದೆ. ಸಂಘವು ಮಗುವಿಗೆ ಶುಭ ಹಾರೈಸುತ್ತದೆ.

## ಸಂಘಕ್ಕೆ ವಾರ್ಷಿಕ ದೇಣಿಗೆ 500 ರೂ. ನೀಡಿದ ಸದಸ್ಯರು

ಶ್ರೀಯುತರು

| | |
|---|---|
| ಬಿ.ಎಸ್. ರಂಗನಾಥ ಪ್ರಸಾದ್ | ಕೆ.ಎಸ್. ಅರುಣ್ |
| ಬಿ.ಇ. ಸಂಧ್ಯಾ | ಟಿ.ಎನ್. ರವಿಕಿರಣ್ |
| ಪದ್ಮನಾಭನ್ | ಟಿ.ಎನ್. ಉಮೇಶ್ |
| ಎಸ್.ಕೆ. ಸುವರ್ಣ | ಟಿ.ಎನ್. ಸುಧಾ |
| ಬಿ.ಎಸ್. ರಾಮೇಶ್ವರ ಪ್ರಸಾದ್ | ಮಧುರ್ ಯು. ಕಶ್ಯಪ್ |

## ಸಂಘಕ್ಕೆ ಹೊಸ ಸದಸ್ಯರ ಸೇರ್ಪಡೆ

ಶ್ರೀಯುತರು ಆರ್. ವಿಶಾಲಾಕ್ಷಿ ಪ್ರವೀಣ್, ಅಕ್ಷಯ ಆತ್ರೇಯ


## ಶುಭ ವಿವಾಹ


* ಸಂಘದ ಕಾರ್ಯಕಾರಿ ಸದಸ್ಯ ಶ್ರೀ ಟಿ.ಪಿ. ಸೂರ್ಯ ನಾರಾಯಣ ಮತ್ತು ಶ್ರೀಮತಿ ಪದ್ಮಾರವರ ಪುತ್ರಿ ಚಿ॥ಸೌ॥ ಎಸ್. **ಸುಪ್ರೀತಾ**ರವರ ವಿವಾಹವು, ಶ್ರೀ ಮುರಳೀಧರ್ ಮತ್ತು ಶ್ರೀಮತಿ ಸುಧಾರವರ ಪುತ್ರ ಚಿ॥ ಎಂ. **ಹರೀಶ್‌ಕುಮಾರ್**ರವರೊಂದಿಗೆ ದಿನಾಂಕ 07–08–19ರಂದು ಬೆಂಗಳೂರಿನಲ್ಲಿ ನಡೆಯಿತು.

* * *

* ಸಂಘದ ಸದಸ್ಯೆ ಶ್ರೀಮತಿ ಎಸ್.ಆರ್. ತಾರಾ ಮತ್ತು ಶ್ರೀ ಬಿ.ಆರ್. ರವೀಂದ್ರರವರ ಪುತ್ರ **ಡಾ. ಆರ್. ಭಾರ್ಗವ್ ಕಶ್ಯಪ್**ರವರ ವಿವಾಹವು ಶ್ರೀಮತಿ ಶಶಿಕಲಾ ಮತ್ತು ಶ್ರೀ ಎಂ.ಎಸ್. ಸುರೇಶ್‌ರವರ ಪುತ್ರಿ **ಡಾ॥ ಎಂ.ಎಸ್. ಆಶಿತಾ**ರವರೊಂದಿಗೆ ದಿನಾಂಕ 25–08–19ರಂದು ಮೈಸೂರಿನಲ್ಲಿ ನಡೆಯಿತು.

**ರೇಖಾ ಚಿತ್ರ** **◆ ಸೋನಿಯಾ ಶಿವರಾಂ**
**9845024620**






ವಿದ್ಯಾರ್ಥಿಯಾದವನು ಈ ಎಲ್ಲಾ ಗುಣಗಳನ್ನು ಬೆಳೆಸಿಕೊಳ್ಳಬೇಕು.

**VIDYARTHI**

**V** Vision -ಗುರಿ, ದೃಷ್ಟಿ

**I** Interest -ಆಸಕ್ತಿ

**D** Discipline - ಶಿಸ್ತು

**Y** Yearning -ಬಲವಾದ ಹಂಬಲ

**A** Academic Skill -ಶಿಕ್ಷಣ ಕೌಶಲ

**R** Right attitude -ಸರಿಯಾದ ಮನೋಭಾವ

**T** Time management -ಸಮಯದ ಸದುಪಯೋಗ

**H** Humility - ವಿನಮ್ರತೆ

**I** Industiousness -ನಿರಂತರ ಕ್ರಮ

ತನ್ನ ಗುರಿಯನ್ನು ಮುಟ್ಟಲು ಈ ಕೆಳಗಿನ ಸಿದ್ಧತೆಗಳನ್ನು ಮಾಡಿಕೊಂಡಿರಬೇಕು.

**SWOT**

**S** Strength - ಸ್ವಸಾಮರ್ಥ್ಯವನ್ನು ಅರಿಯುವುದು

**W** Weakness - ತನ್ನ ದೌರ್ಬಲ್ಯವನ್ನು ತಿಳಿಯುವುದು

**O** Opportunity - ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳುವುದು

**T** Threats - ಇರುವ ಅಪಾಯದ ಬಗ್ಗೆ ಗಮನ ಹರಿಸುವುದು.

ಅರಿತುಕೊಂಡು ಓದುವಾಗ ಹೀಗಿರಬೇಕು.

**SMART**

**S** Specific, skillful - ನಿರ್ದಿಷ್ಟವಾಗಿರಲಿ, ಕೌಶಲ ಪೂರ್ಣವಾಗರಲಿ

**M** Measurable - ಮಾಪನಕ್ಕೆ ಅಳವಡಿಸುವಂತಿರಬೇಕು.

**A** Attainable - ತಲುಪುವಂತಿರಲಿ

**R** Realistic - ವಾಸ್ತವಕ್ಕೆ ಹತ್ತಿರವಿರಲಿ

**T** Time bound-truthful - ನಿಗದಿತ ವೇಳೆ ಸತ್ಯ ವಾಗಿರಬೇಕು.

ಗುರಿಸಾಧನೆಯ ಅವಧಿಯಲ್ಲಿ ಕೆಲವು ತೊಂದರೆಯ ತೊಡಕುಗಳು ಉದ್ಭವಿಸುತ್ತವೆ. ಅವುಗಳನ್ನು ನಿವಾರಿಸಿ ಕೊಂಡಲ್ಲಿ ಮುಂದೆ ಸಾಗಲು ಸಾಧ್ಯ ಅದಕ್ಕೆ ನಾವು 'ಪ್ಲೇಟ್' ಎನ್ನುತ್ತೇವೆ.

**PLATE**

**P** Procastination - ಮುಂದೂಡುವಿಕೆ

**L** Lethargy - ಸೋಮಾರಿತನ

**A** Attractive - ಆಕರ್ಷಣೆಗಳು

**T** Timidity - ಅಂಜುಬುರುಕತನ

**E** Evasion - ಹೊಣೆಗಾರಿಕೆ, ತಪ್ಪಿಸಿಕೊಳ್ಳುವುದು

ಇವುಗಳಿಂದ ಹೊರಬಂದರೆ ಗುರಿಯನ್ನು ಸರಿಯಾದ ಕ್ರಮದಲ್ಲಿ ಮುಟ್ಟಲು ಸಾಧ್ಯವಾಗುತ್ತದೆ. ಇದಕ್ಕಾಗಿ ಬದಲಾವಣೆ ಅಳವಡಿಸಿಕೊಳ್ಳಬೇಕು.

**CHANGE**

**C** Commitment - ವಚನಬದ್ಧತೆ

**H** Honesty - ಪ್ರಾಮಾಣಿಕತೆ

**A** Alignment of mind - ಮಾನಸಿಕ ಸ್ಥಿಮಿತ

**N** Never give up attitude - ಬಿಗಿಪಟ್ಟು

**G** Soul reaching - ಗುರಿಯೆಡೆಗೆ ಗಮನ

**E** Excellence - ಉತ್ಕೃಷ್ಟತೆ – ಆತ್ಮವಿಶ್ವಾಸ

ಇವುಗಳನ್ನು ಪಾಲಿಸಿದರೆ ವಿದ್ಯಾರ್ಥಿಗಳ ಜೀವನ ಓದಿನ ಕಡೆಗೆ ಗಮನಹರಿಸಲು ಸಾಧ್ಯವಾಗುವುದು.

Reading is also one line art -

* ಓದಿರುವ ವಿಷಯವನ್ನು ಅರ್ಥಮಾಡಿಕೊಳ್ಳುವುದು.

* ನೆನಪಿನಲ್ಲಿಟ್ಟುಕೊಳ್ಳುವುದು.

* ಅನಗತ್ಯವಾದ ವಿಷಯಗಳನ್ನು ಮನಸ್ಸಿನಾಳದಿಂದ ಹೊರತೆಗೆದು ಸರಿಯಾದ ರೀತಿಯಲ್ಲಿ ಪ್ರಶ್ನೆಗಳಿಗೆ ಉತ್ತರಿಸುವುದು.

Winners don't do diferent ... they do things differently


ಪ್ರಯತ್ನ ನಮ್ಮದು, ಪ್ರತಿಫಲ ಮಾತ್ರ ಆ ದೇವರು.

◆ ಎಸ್. ಶ್ರೀನಿವಾಸಯ್ಯ

ಯುವಪ್ರತಿಭೆ

# ಪಲ್ಲವಿ ಗುರುಪ್ರಸನ್ನ






**ಸಂ**ಘದ ಪೋಷಕ ಸದಸ್ಯರಾದ ಖಂಜಿರ ವಿದ್ವಾನ್ ಶ್ರೀ ಗುರು ಪ್ರಸನ್ನರವರ ಪತ್ನಿ ಶ್ರೀಮತಿ ಪಲ್ಲವಿ ಯವರು ವಿವಿಧ ಪ್ರತಿಭೆಗಳ ಆಗರ. ಸಂಗೀತ, ಚಿತ್ರಕಲೆ, ತೋಟಗಾರಿಕೆ, ಕವಿತೆರಚನೆ, ಪ್ರಾಣಿಗಳ ಬಗ್ಗೆ ಒಲವು ಹೀಗೆ ಹಲವಾರು ಹವ್ಯಾಸಗಳನ್ನು ಬೆಳೆಸಿ ಕೊಂಡಿರುತ್ತಾರೆ.

ಶ್ರೀಮತಿ ಪಲ್ಲವಿಯವರು ಶ್ರೀ ಜಿ.ಆರ್. ದೊರೆಸ್ವಾಮಿ ಹಾಗೂ ಶ್ರೀಮತಿ ಗಾಯತ್ರಿಯವರ ಸುಪುತ್ರಿ. ಹಿರಿಯ ಕಲಾವಿದರಾದ ಶ್ರೀ ಜಿ.ಆರ್. ಶಿವರಾಂರವರ ಅದ್ಭುತ



ರಂಗೋಲಿ ಬಿಡಿಸುವ ಕಲೆ ಪಲ್ಲವಿಯವರಿಗೆ ಪ್ರೇರಣೆ. ಅದ್ಭುತ ಚಿತ್ತಾಕರ್ಷ ಸೌಂದರ್ಯವನ್ನು ಬಿಂಬಿಸುವ ರಂಗೋಲಿ ಕಣ್ಣಿಗೆ ಹಬ್ಬ. ತಾಳ್ಮೆ ಆಸಕ್ತಿಯೊಂದಿಗೆ ಇದೊಂದು ಶಾರೀರಿಕ ವ್ಯಾಯಾಮ. ಸಮತ್ವ ಪ್ರತಿಷ್ಠಾನದ ಉದ್ಘಾಟನೆಯ ದಿನ ಪಲ್ಲವಿ ಬರೆದಿರುವ ವಿವಿಧ ರಂಗೋಲಿಗಳ 'ಚಿತ್ತಾರದ ವಿಸ್ತಾರ' ಎಂಬ ಹೊತ್ತಿಗೆಯು ಲೋಕಾರ್ಪಣೆಯಾಗಿದ್ದು ಸಂತೋಷ. ಸುಮಾರು 75 ರಂಗೋಲಿಗಳನ್ನೊಳಗೊಂಡ ಪುಸ್ತಕ ಪಲ್ಲವಿ ಪ್ರತಿಭೆಯ ಪ್ರತಿಬಿಂಬ.

ಪಲ್ಲವಿ ರಂಗೋಲಿಗೆ ಮಾತ್ರ ಸೀಮಿತಗೊಳ್ಳದೆ ಸಂಗೀತ ಶಾಲೆಯನ್ನು ನಡೆಸುತ್ತಿರುವುದು ಹಾಗೂ ಸಮತ್ವ ಪ್ರತಿಷ್ಠಾನದ ಮೂಲಕ ಕಲೆಯ ವಿವಿಧ ಪ್ರಾಕಾರಗಳನ್ನು ಪಸರಿಸುವುದು ನಮಗೆಲ್ಲಾ ಸಂತಸದ ವಿಷಯ. ಪಲ್ಲವಿ ಗುರುಪ್ರಸನ್ನ ದಂಪತಿಗಳಿಗೆ ಪ್ರಣವಿ, ಮಾಳವಿ ಎಂಬ ಎರಡು ಹೆಣ್ಣು ಮಕ್ಕಳು. ಇವರೂ ಕೂಡ ಸಂಗೀತದಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವುದು ಮುಂದಿನ ಪೀಳಿಗೆಗೆ ನಾಂದಿ. 'ಚಿತ್ತಾರದ ವಿಸ್ತಾರ' ಪುಸ್ತಕವನ್ನು ಚಲನಚಿತ್ರ ರಂಗದ ಮುತ್ಸದ್ಧಿ ಎಸ್. ಶಿವರಾಂರವರು ಬಿಡುಗಡೆ ಮಾಡಿದರು. ಗಾನಕಲಾಶ್ರೀ ವಿದೂಷಿ ಶ್ರೀಮತಿ ಕಲಾವತಿ ಅವಧೂತರವರು ಮುನ್ನುಡಿ ಬರೆದಿದ್ದಾರೆ.

**ಸಂಘವು ಶ್ರೀಮತಿ ಪಲ್ಲವಿ ಗುರುಪ್ರಸನ್ನ ಹಾಗೂ ಅವರ ಕುಟುಂಬಕ್ಕೆ ಶುಭ ಹಾರೈಸುತ್ತದೆ.**





ಶಿಕ್ಷಕರ ದಿನಾಚರಣೆ ವಿಶೇಷ

# ಗುರುವಿಗೆ ನುಡಿ ನಮನ

**ಶಿ**ಕ್ಷಣ ಎಂದಕೂಡಲೇ ನಮ್ಮೆಲ್ಲರ ಕಣ್ಣ ಮುಂದೆ ಬರುವ ವ್ಯಕ್ತಿ ಎಂದರೆ ನಮ್ಮೆಲ್ಲರ ನೆಚ್ಚಿನ ಶಿಕ್ಷಕರು. ಪ್ರತಿಯೊಬ್ಬರ ಜೀವನದಲ್ಲಿಯೂ ಒಂದಲ್ಲಾ ಒಂದು ವ್ಯಕ್ತಿ ಆ ಸ್ಥಾನದಲ್ಲಿ ನಿಂತು ನಮ್ಮನ್ನೆಲ್ಲಾ ಪ್ರೇರೇಪಿಸಿರುತ್ತಾರೆ. ಅಂತಹ ಎಲ್ಲಾ ಶಿಕ್ಷಕರು ಗಳಿಗೆ ನನ್ನ ಮನಃಪೂರ್ವಕ ಅಭಿನಂದನೆ ಮತ್ತು ನಮನಗಳು.




ಯಾವುದೇ ವ್ಯಕ್ತಿ ತನ್ನ ಜೀವನದಲ್ಲಿ ಸಾಧಿಸಿದ್ದಾನೆಂದಾದರೆ, ಅವನಿಗೆ ಖಚಿತವಾದ ಗುರಿ ಇದ್ದೇ ಇರುತ್ತದೆ. ಗುರಿ ಒಂದಿದ್ದರೆ ಸಾಕೇ? ಅದಕ್ಕೆ ದಾರಿದೀಪವಾಗಿ ಗುರುವೂ ಇರಬೇಕಲ್ಲವೆ? ಅಂತೆಯೇ ನಾವು ಸೆಪ್ಟೆಂಬರ್ 5 ರಂದು ಶಿಕ್ಷಕರ ದಿನವನ್ನು ಆಚರಿಸುತ್ತೇವೆ. ಈ ದಿನದ ವಿಶೇಷತೆ ಯೆಂದರೆ ಶ್ರೀ ಸರ್ವಪಲ್ಲಿ ರಾಧಾಕೃಷ್ಣನ್‌ರವರನ್ನು ಸ್ಮರಿಸುವ ಸುದಿನ. ಈ ಅದ್ವಿತೀಯ ವ್ಯಕ್ತಿಯ ಬಗ್ಗೆ ಅವರ ಜೀವನ ಶೈಲಿಯ ಬಗ್ಗೆ ಮತ್ತು ಅವರ ವೃತ್ತಿಪರ ಬದುಕಿನ ಬಗ್ಗೆ ನಮಗೆಷ್ಟು ತಿಳಿದಿದೆ?

ಶ್ರೀ ಸರ್ವಪಲ್ಲಿ ರಾಧಾಕೃಷ್ಣನ್‌ರವರು ಮೂಲತಃ ತಮಿಳುನಾಡಿನವರು. ನಮ್ಮ ರಾಷ್ಟ್ರದ ಮೊದಲ ಉಪರಾಷ್ಟ್ರಪತಿ ಮತ್ತು ಎರಡನೆ ರಾಷ್ಟ್ರಪತಿ. ಚೆನ್ನೈನ ಬ್ರಾಹ್ಮಣ ಕುಟುಂಬದಲ್ಲಿ ಇವರ ಜನನ. 16ನೇ ವಯಸ್ಸಿಗೇ ವಿವಾಹಿತರಾದ ಇವರು, ನಂತರದ ತಮ್ಮ ಬದುಕಿಗೆ ರೂಪುರೇಷೆಗಳನ್ನು ತಮ್ಮದೇ ಶೈಲಿಯಲ್ಲಿ ಇತ್ತವರು. ಇವರು 1909ರಲ್ಲಿ ತಮ್ಮ ಸ್ನಾತಕೋತ್ತರ ಪದವಿಯನ್ನು ಚೆನ್ನೈನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪೂರ್ಣಗೊಳಿಸಿ, ಅದೇ ಸಂಸ್ಥೆಯಲ್ಲಿ, ಸಹಾಯಕ ಉಪನ್ಯಾಸಕರಾಗಿ ತಮ್ಮ ವೃತ್ತಿಯನ್ನು ಪ್ರಾರಂಭಿಸುತ್ತಾರೆ. ಇವರ ವಿದ್ಯಾರ್ಹತೆ ಮತ್ತು ಆಯ್ದು ಕೊಂಡಿದ್ದ ವಿಷಯ ಅದ್ಬುತವಾಗಿದ್ದು, ತತ್ವಶಾಸ್ತ್ರ ಪಠ್ಯಕ್ರಮ ಗಳನ್ನು ಉಪನ್ಯಾಸ ನೀಡುವಲ್ಲಿ ಅತ್ಯಂತ ಮೆಚ್ಚಿನ ಅಧ್ಯಾಪಕರು ಗಳಲ್ಲಿ ಒಬ್ಬರಾಗಿದ್ದರು. ಇವರು ಅತ್ಯಂತ ಚಿಕ್ಕವಯಸ್ಸಿ ನಲ್ಲಿಯೇ ಅಂದರೆ, 20 ವರ್ಷಗಳೊಳಗಾಗಿ ಸ್ನಾತಕ ಪದವಿ ಪೂರ್ಣಗೊಳಿಸಿದ ಹೆಗ್ಗಳಿಕೆಗೆ ಒಳಪಟ್ಟವರಾಗಿದ್ದಾರೆ. ಅಂದಿನ ಮೈಸೂರಿನ ಮಹಾರಾಜರಾದ ಶ್ರೀ ಜಯಚಾಮ ರಾಜೇಂದ್ರ ಒಡೆಯರ್‌ರವರು, ಇವರ ವಿಷಯ ಪ್ರಾವೀಣತೆಯನ್ನು ಮೆಚ್ಚಿ, ಮೈಸೂರು ವಿಶ್ವವಿದ್ಯಾಲಯಕ್ಕೆ ಇವರನ್ನು ಪ್ರಾಧ್ಯಾಪಕರಾಗಿ ನೇಮಕಮಾಡಿಕೊಳ್ಳುತ್ತಾರೆ. ನಂತರದಲ್ಲಿ, ಶ್ರೀ ಎಸ್.ರಾಧಾಕೃಷ್ಣನ್‌ರವರು ಮೈಸೂರಿನ ಮಹಾರಾಜ ಕಾಲೇಜಿನಲ್ಲಿಯೂ ಸಹ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಾರೆ.

ಶ್ರೀ ರಾಧಾಕೃಷ್ಣನ್‌ರವರು ತಮ್ಮ 30ನೇ ವಯಸ್ಸಿನಲ್ಲಿಯೇ ಆಂಧ್ರ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ, ದೇಶದಲ್ಲಿಯೇ ಇಂದಿಗೂ ಅತ್ಯಂತ ಚಿಕ್ಕ ವಯಸ್ಸಿಗೇ ಉಪ ಕುಲಪತಿಗಳಾದವರು. ತದನಂತರದಲ್ಲಿ, ವಾರಣಾಸಿಯ ಬನಾರಸ್ ವಿಶ್ವವಿದ್ಯಾಲಯದ ಉಪಕುಲಪತಿ ಗಳಾಗುತ್ತಾರೆ. ಇವರು ದೇಶಮಾತ್ರವಲ್ಲದೆ 1926ರಲ್ಲಿ ಮೊಟ್ಟಮೊದಲಿಗೆ ಹಾರ್ವರ್ಡ ವಿಶ್ವವಿದ್ಯಾಲಯದಲ್ಲಿ ನೀಡಿದ ಉಪನ್ಯಾಸಗಳು ಆಗಿನ ಕಾಲಕ್ಕೆ ಪ್ರಕಟಣೆಗೊಂಡಿರುತ್ತದೆ. ಇವರು ಭಾರತದಲ್ಲಿ ಮಾತ್ರವಲ್ಲ ಅನ್ಯದೇಶಗಳಲ್ಲಿಯೂ ಸಹ ವೇದಾಂತ ಮತ್ತು ಅದ್ವೈತ ವೇದಾಂತಗಳ ವಿಷಯಗಳಲ್ಲಿ ಹೆಚ್ಚಿನ ವಿಮರ್ಶೆ ನಡೆಸಿ, ಅಲ್ಲಿನ ವಿಶ್ವವಿದ್ಯಾಲಯಗಳಲ್ಲಿ ಪ್ರವಚನಗಳನ್ನು ನೀಡಿದ್ದಾರೆ. ಇಂತಹ ಅದ್ಭುತ ವ್ಯಕ್ತಿತ್ವವನ್ನು ಹೊಂದಿದ ಹಿರಿಯ ಮುತ್ಸದ್ದಿಯ ಬಗ್ಗೆ ನಮ್ಮ ಮುಂದಿನ ಪೀಳಿಗೆಗೆ ಒಂದಿಷ್ಟು ವಿಷಯ ತಿಳಿದು ಅವರು ನಮ್ಮ ಮಕ್ಕಳಿಗೆ ಮಾದರಿಯಾಗಬೇಕು ಎಂದು ನನ್ನ ಬಯಕೆ.

ಆಶ್ಚರ್ಯಕರ ವಿಷಯವೆಂದರೆ, ಭಾರತೀಯ ಪ್ರಾಥಮಿಕ ಶಿಕ್ಷಣದಲ್ಲಿ ಎಲ್ಲಿಯೂ ಸಹ ರಾಧಾಕೃಷ್ಣನ್‌ರವರ ಬಗ್ಗೆ ಪಠ್ಯಕ್ರಮದಲ್ಲಿ ಸೇರ್ಪಡೆಯಾಗಿಲ್ಲ. ನಾವು ಇಂದಿನ ಪ್ರಾಪಂಚಿಕ ಓಟದಲ್ಲಿ ಓಡುತ್ತಿದ್ದೇವೆಯೆ ಹೊರತು ಅದನ್ನು ಬದಲಾಯಿಸುವ ಯಾವುದೇ ಪ್ರಯತ್ನ ಮಾಡಿಲ್ಲ. ಇದಕ್ಕೆ ಯಾರು ಹೊಣೆ? ನಾವು ನಡೆಯುತ್ತಿರುವ ದಾರಿ ಸರಿ ಇದೆಯೇ? ನಮ್ಮ ಆಯ್ಕೆಗಳ ಬಗ್ಗೆ ಯೋಚಿಸುವ ಸಮಯ..... ನೆಚ್ಚಿನ ಪೋಷಕರೆ ಈ ಬಗ್ಗೆ ನೀವೇ ಯೋಚಿಸಿ.

ನಿಮ್ಮವ,



◆ **ರವಿಕಿರಣ್.ಟಿ.ಎನ್.**
9972677005

# ಜ್ಯೋತಿಷ್ಯಶಾಸ್ತ್ರ – ಒಂದು ವಿಶ್ಲೇಷಣೆ

**ಜ್ಯೋ**ತಿ ಎಂದರೆ ದೀಪ, ಬೆಳಕು. ಜ್ಯೋತಿಷ್ಯ ಎಂದರೆ ನಮ್ಮ ಜೀವನಕ್ಕೆ ಬೆಳಕು ನೀಡುವ ದಾರಿದೀಪ. ಮೂಢನಂಬಿಕೆಯಲ್ಲ. ಜನರ ಅಂಧಕಾರ ತೊಲಗಿಸಿ ಬೆಳಕು ನೀಡುವ ವಿಜ್ಞಾನ ಶಾಸ್ತ್ರ, ಅಂದರೆ ಖಗೋಳ ಶಾಸ್ತ್ರ ಮತ್ತು ಗಣಿತವನ್ನು ಅಂದರೆ ಲೆಕ್ಕಾಚಾರ ಚೆನ್ನಾಗಿ ಬಲ್ಲವರಿಗೆ ಮಾತ್ರ ಜ್ಯೋತಿಷ್ಯದಲ್ಲಿ ಪರಿಣಿತಿ ಪಡೆಯಲು ಸಾಧ್ಯ ಮತ್ತು ಪೂರ್ವ ಪುಣ್ಯದ ಸುಕೃತದಿಂದ ಸ್ವಲ್ಪಮಟ್ಟಿಗೆ ಜ್ಯೋತಿಷ್ಯ ಕಲಿಯಬಹುದು. ಇದು ಅಧ್ಯಾತ್ಮಿಕ, ಧಾರ್ಮಿಕ, ಶ್ರದ್ಧಾಭಕ್ತಿಯ ಮೇಲೆ ನಿಂತಿದೆ.

ಒಳ್ಳೆಯ ರೀತಿ, ನಡತೆ, ಶಾಂತತೆ, ಸುಳ್ಳು ಹೇಳದೆ ಸತ್ಯಸಂಧತೆ, ನ್ಯಾಯಪರತೆ, ಅಂತಃಕರಣ ಶುದ್ಧಿ, ಅಂದರೆ ತ್ರಿಕರಣ ಶುದ್ಧಿಯಿಂದ ಈ ಶಾಸ್ತ್ರವನ್ನು ಕಲಿಯಬೇಕು. ಇದು ವಾಸ್ತುಶಾಸ್ತ್ರ, ಹಸ್ತಸಾಮುದ್ರಿಕ, ಸಂಖ್ಯಾಶಾಸ್ತ್ರ, ಪ್ರಶ್ನತಂತ್ರ, ಯಂತ್ರ, ಮಂತ್ರ, ಕರ್ಮ ಸಿದ್ಧಾಂತದ ಆಧಾರ ಎಲ್ಲವನ್ನೂ ಒಳಗೊಂಡು ಉಪಶಾಸ್ತ್ರವೆನಿಸಿದೆ.

ಜ್ಯೋತಿಷ್ಯ ಶಾಸ್ತ್ರವನ್ನು ಋಷಿಮುನಿಗಳು ಸಾವಿರಾರು ವರ್ಷಗಳ ಹಿಂದೆ, ಅಂದರೆ ಪರಾಶರ, ವರಾಹ ಮಿಹಿರಾಚಾರ್ಯ, ಗರ್ಗ, ವ್ಯಾಸ, ವಸಿಷ್ಠ ಮುಂತಾದವರು ಲೋಕ ಕಲ್ಯಾಣಕ್ಕಾಗಿ, ಸೂರ್ಯ, ಚಂದ್ರ ಗ್ರಹಗಳ ಸಂಚಾರದ ಆಧಾರದ ಮೇಲೆ ಗ್ರಂಥಗಳಲ್ಲಿ ಬರೆದಿಟ್ಟಿದ್ದಾರೆ. ಆದ್ದರಿಂದ ಜ್ಯೋತಿಷ್ಯ ಮಾತ್ರ ಯಾವಾಗಲೂ ಸುಳ್ಳಾಗುವುದಿಲ್ಲ.

ಇದು ರಾಮಾಯಣ, ಮಹಾಭಾರತ ಕಾಲದಿಂದಲೂ ಮಹತ್ವ ಪಡೆದಿದೆ. ದಶರಥ ಮಹಾರಾಜ ಜ್ಯೋತಿಷ್ಯವನ್ನು ಸ್ವತಃ ತಾವೇ ಹೇಳುತ್ತಿದ್ದರಂತೆ. ರಾವಣ ರಾಕ್ಷಸನಾದರೂ ಸದ್ ಬ್ರಾಹ್ಮಣನಾಗಿದ್ದನು ಮತ್ತು ಒಳ್ಳೆಯ ಜ್ಯೋತಿಷಿಯಾಗಿದ್ದನು. ಶ್ರೀ ರಾಮಚಂದ್ರನಿಗೆ ರಾವಣನೇ ಯುದ್ಧಕ್ಕೆ ಒಳ್ಳೆಯ ಮುಹೂರ್ತ ನಿಶ್ಚಯಿಸಿಕೊಟ್ಟನು. ಸುಳ್ಳು ಹೇಳದೆ, ಸತ್ಯದಿಂದ ರಾಮನಿಗೆ ಒಳ್ಳೆಯ ಮುಹೂರ್ತ ಕೊಟ್ಟು, ರಾಮನ ಕೈಯಲ್ಲಿ ಮರಣಿಸಿ ಮೋಕ್ಷವನ್ನು ಪಡೆದನು. ನಕುಲ, ಸಹದೇವರು ಒಳ್ಳೆಯ ಜ್ಯೋತಿಷಿಗಳಾಗಿದ್ದರು.

ಜ್ಯೋತಿಷ್ಯವನ್ನು ವ್ಯಾವಹಾರಿಕವಾಗಿ ಪರಿಗಣಿಸದೆ, ಮಹತ್ವ ತಿಳಿದು ಜನರಿಗೆ ಒಳ್ಳೆಯದನ್ನು ಮಾಡಲು, ಅನುಕೂಲಕ್ಕಾಗಿ ಬಳಸಿಕೊಳ್ಳಬೇಕು. ಆದರೆ ಇಂದು, ಮೂಲ ಗ್ರಂಥಗಳ ಅಧ್ಯಯನ ಮಾಡದೆ ಕೆಲವರು ಶಾಸ್ತ್ರ ಹೇಳುವ ಮೂಲಕ ಜನರ ದಾರಿತಪ್ಪಿಸಿ, ಮೋಸ, ವಂಚನೆಗಳಿಂದ ಹಣಸಂಪಾದನೆ ಮಾರ್ಗವನ್ನು ಮಾಡಿಕೊಂಡಿದ್ದಾರೆ.

ಜ್ಯೋತಿಷ್ಯದಿಂದ ಪೂರ್ಣಪ್ರಮಾಣದ ಪರಿಹಾರ ಸಾಧ್ಯವಿಲ್ಲದಿದ್ದರೂ ಸ್ವಲ್ಪಮಟ್ಟಿಗೆ ಪರಿಹಾರ, ಮಾನಸಿಕ ಸ್ಥೈರ್ಯ, ಸಂಕಷ್ಟದಲ್ಲಿರುವವರಿಗೆ ನೀಡಬಲ್ಲದು ಮತ್ತು ಕಷ್ಟಗಳ ತೀವ್ರತೆಯನ್ನು ಕಡಿಮೆ ಮಾಡಲು ಸಾಧ್ಯವಾಗುವುದು. ಸಮಸ್ಯೆಗಳ ಒತ್ತಡ ನಿವಾರಿಸಿಕೊಳ್ಳಬಹುದು. ನಮ್ಮ ಜನ್ಮಾಂತರದ ಕರ್ಮಾನುಸಾರವಾಗಿ ನಾವು ಈ ಜನ್ಮದಲ್ಲಿ ಕಷ್ಟ, ಸುಖ, ವಿವಾಹ, ಸಂತಾನ, ವೃತ್ತಿ ಎಲ್ಲವನ್ನೂ ಅನುಭವಿಸಲೇಬೇಕು.

ದೇಹಕ್ಕೆ ಮಾತ್ರ ಮರಣ ನಿಶ್ಚಿತ. ಆತ್ಮಕ್ಕೆ ಸಾವಿಲ್ಲ. ಅದು ನಮ್ಮ ಮರಣದ ನಂತರ ನಮ್ಮ ಕರ್ಮ ಶೇಷವನ್ನು ಜ್ಞಾಪಕದಲ್ಲಿಟ್ಟುಕೊಂಡು, ಜನ್ಮಾಂತರದಲ್ಲೂ ನಮ್ಮನ್ನು ಹಿಂಬಾಲಿಸಿಕೊಂಡು ಬರುತ್ತದೆ ಮತ್ತು ನಾವು ಯಾರಿಗಾದರೂ ನೋಯಿಸಿದ್ದರೆ, ನಿಂದಿಸಿದ್ದರೆ, ಕ್ರೂರವಾಗಿ ವರ್ತಿಸಿ, ಮೋಸ ಮಾಡಿದ್ದರೆ, ಇವೆಲ್ಲವೂ ಆತ್ಮಕ್ಕೆ ಅಂಟಿಕೊಂಡು, ನಮಗೆ ಜನ್ಮ ತಪ್ಪಿದ್ದಲ್ಲ. ಕರ್ಮ ಅನುಭವಿಸಲು ಪುನಃ ಪುನಃ ಹುಟ್ಟಿಬರಬೇಕಾಗುತ್ತದೆ.

**ಪುನರಪಿ ಜನನಂ। ಪುನರಪಿ ಮರಣಂ।**

ತಾಯಿ ಹಸುವನ್ನು ಕರುವು ಹಿಂಬಾಲಿಸುವಂತೆ ನಮ್ಮ ಕರ್ಮಗಳು ನಮ್ಮನ್ನೇ ಹಿಂಬಾಲಿಸುತ್ತದೆ.

ಪೂರ್ವಜನ್ಮದಲ್ಲಿ ಮಾಡಿದ ಪಾಪಕರ್ಮ ನಮ್ಮನ್ನು ವ್ಯಾಧಿರೂಪದಲ್ಲಿ ಬಾಧಿಸುತ್ತದೆ. ಅಂದರೆ ಸದಾ ಕಾಲ ಅನಾರೋಗ್ಯಪೀಡಿತರಾಗಿರುತ್ತೇವೆ. ಜನ್ಮಾಂತರದ ಪಾಪ ಪುಣ್ಯಗಳು ಇಲ್ಲವಾದಾಗ, ನಮಗೆ ಮುಂದಿನ ಜನ್ಮ ಇಲ್ಲವೆಂದು ಹೇಳಬಹುದು. ಅದು ಬಹುಶಃ ಸನ್ಯಾಸಿ, ಸತ್ಕಾರ್ಯ, ಸತ್ಕರ್ಮ ಮಾಡಿದ ಗುರುಗಳು, ಜಗದ್ಗುರುಗಳಿಗೆ ಅನ್ವಯಿಸಬಹುದು.

ಭವಿಷ್ಯದಲ್ಲಿ ಬರುವ ಸಂಕಷ್ಟಗಳು. ಸಮಸ್ಯೆ, ವಿವಾಹ ವಿಳಂಬ, ವಿಚ್ಛೇದನ, ಆಸ್ತಿ ಜಗಳ, ನ್ಯಾಯಲಯದ ಮೆಟ್ಟಿಲು ಹತ್ತಿದ ಮನೆ ವ್ಯಾಜ್ಯಗಳು, ಸರ್ಪದೋಷ ಮುಂತಾದ ವಿಚಾರಗಳನ್ನು ಮೊದಲೇ ಜ್ಯೋತಿಷ್ಯದಿಂದ ತಿಳಿದುಕೊಂಡು ಎಚ್ಚೆತ್ತುಕೊಂಡರೆ, ಅದಕ್ಕೆ ಪರಿಹಾರಕಂಡುಕೊಳ್ಳಬಹುದು ಮತ್ತು ಕಷ್ಟಗಳನ್ನು ಮಾನಸಿಕ ಸ್ಥೈರ್ಯ, ಆತ್ಮವಿಶ್ವಾಸ, ಆಶಾಭಾವನೆಯಿಂದ ಎದುರಿಸಿ ಸ್ವಲ್ಪ ನೆಮ್ಮದಿಯಾಗಿರ ಬಹುದು. ಜ್ಯೋತಿಷ್ಯದಿಂದ ಇದು ಸುಲಭ ಸಾಧ್ಯವಾಗುತ್ತದೆ.

ಜ್ಯೋತಿಷ್ಯ ಶಾಸ್ತ್ರವು 12 ರಾಶಿ, 12 ಭಾವ, 9 ಗ್ರಹಗಳು, 29 ನಕ್ಷತ್ರಗಳ ಚಲನವಲನಗಳ ಆಧಾರದಿಂದ ಏರ್ಪಟ್ಟಿದೆ. ಇದರಿಂದ ಜ್ಯೋತಿಷ್ಯ ಫಲವನ್ನು ನಿಖರವಾಗಿ ತಿಳಿಯ ಬಹುದು. ಅದರ ಫಲದಂತೆ ನಾವು ಜನ್ಮಾಂತರದ ಪಾಪ,

ಪುಣ್ಯ, ಸುಖ, ದುಃಖ, ಉತ್ತಮ ಜೀವನ, ವಿದ್ಯಾಭ್ಯಾಸ, ಜ್ಞಾನ ಎಲ್ಲವನ್ನೂ ಅನುಭವಿಸಲೇಬೇಕು. ಅನುಭವಿಸುತ್ತೇವೆ. ಪಾಪ ಕರ್ಮಗಳನ್ನು ಮಾಡಿದರೆ, ಇವೆಲ್ಲದರಿಂದ ವಂಚಿತರಾಗಿ ಪೀಡಿಸಲ್ಪಡುತ್ತೇವೆ. ಎಲ್ಲವೂ ನಕಾರಾತ್ಮಕ ವಾಗಿರುತ್ತದೆ. ಪುಣ್ಯ ಫಲದಿಂದ ಸಕಾರಾತ್ಮಕ ಶಕ್ತಿ ಉತ್ಪತ್ತಿಯಾಗುತ್ತದೆ. ಇದಕ್ಕೆ ತಕ್ಕಂತೆ, ಜ್ಯೋತಿಷ್ಯದಿಂದ ಪರಿಹಾರವಾಗಿ, ಪೂಜೆ, ಜಪ, ತಪ, ಯಂತ್ರ, ಮಂತ್ರ, ಹವನ, ಹೋಮ, ದಾನ, ಧರ್ಮ, ಆಯಾಯ ಗ್ರಹಗಳಿಗೆ, ದೇವತೆಗಳಿಗೆ ಮಾಡಿದರೆ, ಪರಿಹಾರ ಸಿದ್ಧತೆ ಮಾಡಿಕೊಂಡು ನಿವಾರಣೆ ಮಾಡಿಕೊಳ್ಳಬಹುದು. ಕಷ್ಟಗಳ ತೀವ್ರತೆ, ಮಾನಸಿಕ ಒತ್ತಡ ಸ್ವಲ್ಪಮಟ್ಟಿಗೆ ನಿವಾರಣೆಯಾಗಿ ನೆಮ್ಮದಿ ದೊರಕುವುದು. ಮುಹೂರ್ತಗಳನ್ನೂ ಸಹ, ಜ್ಯೋತಿಷಿಗಳಿಂದ ನಿರ್ಣಯ ಮಾಡಬಹುದು. ಇದನ್ನು ಪಂಚಾಂಗದ ಸಹಾಯದಿಂದ ಮಾಡಬಹುದು. ತಿಥಿ, ವಾರ, ನಕ್ಷತ್ರ, ಯೋಗ, ಕರಣ ಇವು ಐದೂ ಸೇರಿ ಪಂಚಾಂಗವೆನಿಸಿದೆ.

ಜ್ಯೋತಿಷ್ಯ ಮಾತ್ರ ಎಂದಿಗೂ ಸುಳ್ಳಾಗಲಾರದು. ತಾತ್ಸಾರ ಮಾಡದೆ, ಒಳ್ಳೆಯ ರೀತಿಯಲ್ಲಿ ಉಪಯೋಗಿಸಿ ಕೊಳ್ಳಬೇಕು ಅಷ್ಟೇ. ಎಲ್ಲದಕ್ಕೂ ನಂಬಿಕೆಯೇ ಮುಖ್ಯ ವಾಗಿರುತ್ತದೆ. "ಸರ್ವೇ ಜನಾಃ ಸುಖಿನೋ ಭವಂತು."



◆ **ಗಾಯತ್ರಿ ಶೇಷಾಚಲ**
9449730073

## ಶುಭಾಶಯಗಳು

* ಸಂಘದ ಸದಸ್ಯೆ **ಶ್ರೀಮತಿ ಛಾಯಾ ಭಗವಾನ್**ರವರು ತಮ್ಮ 70ನೇ ವರ್ಷದ ಹುಟ್ಟಿದ ದಿನವನ್ನು ದಿನಾಂಕ 04–08–19ರಂದು ಅವರ ಕುಟುಂಬ ವರ್ಗದವರೊಂದಿಗೆ ಆಚರಿಸಿಕೊಂಡರು.

* * *

* ಸಂಘದ ಸದಸ್ಯ **ಶ್ರೀ ಟಿ.ಪಿ. ಜಗನ್ನಾಥ್**ರವರು ಷಷ್ಠಿಪೂರ್ತಿ ಶಾಂತಿಯನ್ನು ದಿನಾಂಕ 06–08–19ರಂದು ಬೆಂಗಳೂರಿನಲ್ಲಿ ಕುಟುಂಬ ಹಾಗೂ ಸ್ನೇಹಿತರೊಂದಿಗೆ ಆಚರಿಸಿಕೊಂಡರು.

*ಸಂಘವು ಹುಟ್ಟು ಹಬ್ಬ ಆಚರಿಸಿಕೊಂಡ ಸಂಘದ ಹಿರಿಯ ಸದಸ್ಯರೆಲ್ಲರಿಗೂ ಶುಭ ಹಾರೈಸುತ್ತದೆ.*


ನೆನಪಿನಂಗಳ

## ಬೃಹಚ್ಚರಣ ಸಂಘ 2010ರ ಕಾರ್ಯಕಾರಿ ಸಮಿತಿ



*ಕೃಪೆ : ಗಣೇಶ್ ಶ್ರೀಧರ್*

# ಮಂಕುತಿಮ್ಮನ ಕಗ್ಗ – ತಾತ್ಪರ್ಯ



**ರಾಮನಿರ್ದಂದು ರಾವಣನೊಬ್ಬ ನಿರ್ದನಲ**
**ಭೀಮನಿರ್ದಂದು ದುಶ್ಯಾಸನನ ದೊರ್ವನ್**
**ಈ ಮಹಿಯೊಳ್ ನ್ಯಾಯಕಾರಿಯಲ್ಲದುದೆಂದು?**
**ರಾಮಭಟನಾಗು ನೀಂ – ಮಂಕುತಿಮ್ಮ ॥**

ಅಂದು ತ್ರೇತಾಯುಗದಲ್ಲಿ ಧರ್ಮವೇ ಮೂರ್ತಿವೆತ್ತಂತ ಶ್ರೀ ರಾಮನಿರುವಾಗಲೇ, ರಾವಣನೂ ಇದ್ದನಲ್ಲವೇ? ದ್ವಾಪರಯುಗದಲ್ಲೂ ಭೀಮನಿರುವ ಕಾಲದಲ್ಲೇ ದುಶ್ಶಾಸನನೂ ಇದ್ದನಲ್ಲವೇ? ಈ ವಿಶ್ವದಲ್ಲಿ ಸಜ್ಜನರೂ ದುರ್ಜನರೂ ಇರುವುದು ಸಹಜ. ಅನ್ಯಾಯಗಳು ನಡೆಯುತ್ತಲೇ ಇರುತ್ತವೆ. ಆದ್ದರಿಂದ ನೀನು ನ್ಯಾಯ ಧರ್ಮದ ಮೂರ್ತಿಯಾದ ಶ್ರೀರಾಮನ ದಾಸನಾಗು. ರಾಮಭಕ್ತ ಹನುಮಂತನಂತೆ ನೀನೂ ಅನ್ಯಾಯ, ಅಧರ್ಮದ ವಿರುದ್ಧ ಹೋರಾಡಿ ಜಯಶೀಲನಾಗು. ಇಲ್ಲಿ ರಾಮಭಟನಾಗು ಎನ್ನುವುದಕ್ಕೆ ಇನ್ನೊಂದು ಅರ್ಥವಿದೆ. "ರಮಯತೀತಿ ರಾಮಃ" ಮನಸ್ಸಿಗೆ ಹಿತವಾಗಿ ಕಾಣುವುದೇ ರಾಮ ಎನ್ನುವ ಅರ್ಥವಿದೆ. ಸರ್ವರ ಮನಸ್ಸಿಗೆ ಹಿತವನ್ನುಂಟು ಮಾಡಿ ಜನಾನುರಾಗಿಯಾಗು ಎಂದು ತಿಮ್ಮ ಗುರು ಉಪದೇಶಿಸಿದ್ದಾರೆ.

ಜಗತ್ತಿನ ಸೃಷ್ಟಿಯಾದಾಗಿನಿಂದಲೂ ದ್ವಂದ್ವಗಳು ಇರುವುದು ಸಹಜ. ನೋವು–ನಲಿವು, ಸಜ್ಜನ–ದುರ್ಜನ. ಸುಖ–ದುಃಖ, ಏಳು–ಬೀಳು ಮುಂತಾದವುಗಳಿವೆ. ಇದಕ್ಕೆ ದೇವನೂ ಹೊರತಲ್ಲ.

"ಶಿವರುದ್ರನಲೆ ಬೊಮ್ಮ ಕರವೊಂದರಲ್ಲಿ ವೇಣು ಶಂಖವೊಂದರಲ್ಲಿ" ಮಂಗಳಕರನಾದ ಶಿವನೇ ರುದ್ರನೂ ಆಗಬಲ್ಲ. ತನ್ನ ವೇಣುನಾದದಿಂದ ಗೋವುಗಳನ್ನೂ, ಗೋಪಿಕಾ ಸ್ತ್ರೀಯರನ್ನು ಪರಮಾನಂದಕ್ಕೆ ಒಯ್ಯುತ್ತಾ ಇರುವ ಶ್ರೀಕೃಷ್ಣನೇ ಕುರುಕ್ಷೇತ್ರದಲ್ಲಿ ಪಾಂಚಜನ್ಯವೆಂಬ ಕಹಳೆ ಊದಿ ಶತ್ರುಗಳ ಹೃದಯವನ್ನೇ ಒಡೆದು ಹೋಗುವಂತೆ ಮಾಡುತ್ತಾನೆ. "ಬೆರಳುಗಳು ಎರಡಾದರೇ ತಾನೇ ಚಿಟಿಕೆಯಾಡುವುದು. ಒಂದರಿಂದ ಏನೂ ಸಾಧ್ಯವಿಲ್ಲ" ಎಂದು ಒಂದು ಮುಕ್ತಕದಲ್ಲಿ ಡಿ.ವಿ.ಜಿ.ಯವರು ತಿಳಿಸಿದ್ದಾರೆ.

ದೈವಗುಣ–ಪಾಶವೀ ಗುಣಗಳ ಮಿಶ್ರಣವೇ ಮನುಷ್ಯ ಸ್ವಭಾವ ಎನ್ನಬಹುದು. ದೈವಿಕ ಗುಣಗಳಿದ್ದರೆ ದಯ, ಕರುಣೆ, ಮರುಕ, ಪ್ರೀತಿ, ಸಹನೆ, ಶಾಂತಿ ಮುಂತಾದ ಸದ್ಗುಣಗಳಿದ್ದು ಅವನ ಮನಸ್ಸು ಆಕಾಶದಂತೆ ವಿಶಾಲ ಮತ್ತು ಬದುಕು ಸುಂದರ ಆಗುತ್ತದೆ. ಪಾಶವೀ ಗುಣಗಳಿದ್ದಾಗ ಅಸಹನೆ, ಕ್ರೋಧ, ದ್ವೇಷ, ಅಸೂಯೆ, ಕ್ರೌರ್ಯ ಮುಂತಾದವುಗಳಿಂದ ಮನಸ್ಸು ಕಿರಿ ಕಿರಿ ಆಗಿ ಬದುಕು ಭಾರವಾಗುತ್ತದೆ.

ಮನುಷ್ಯ ಮಿಶ್ರ ಗುಣಗಳಿರುವುದರಿಂದ ಕೆಲವು ಸಮಯದಲ್ಲಿ ಸಭ್ಯನಾಗಿಯೂ, ಕೆಲವು ಸಲ ಸ್ವಾರ್ಥಿಯಾಗಿ ಅಸಭ್ಯನಾಗಿ ವರ್ತಿಸುತ್ತಾನೆ. ಮುಂದಿನ ಮುಕ್ತಕದಲ್ಲಿ ಜನರಿಗೆ ಒಂದು ಹಿತವಚನವನ್ನು ನುಡಿದಿದ್ದಾರೆ. ಡಾ. ಡಿ.ವಿ.ಜಿ.ಅವರು.

ಎಲೈ ನರನೇ, ನೀನು ನರನ ವಕ್ರಗುಣಗಳನ್ನು ಕಂಡು ಏಕೆ ಕೊರಗುವೆ? ದೃಶ್ಯ ಪ್ರಪಂಚದಲ್ಲಿ ನಾವು ಕಾಣುವ ಗಿರಿ–ಕಣಿವೆಗಳನ್ನು ಕಂಡು ನಾವು ಕೋಪಗೊಳ್ಳುತ್ತವೆಯೇ? ಕ್ಷೀರ ಸಮುದ್ರವನ್ನು ಕಡೆದಾಗ ಅಮೃತ ವಿಷ ಎರಡೂ ಉದ್ಭವಿಸಲಿಲ್ಲವೇ? ಎರಡೂ ಸಹೋದರರೇ ಅಲ್ಲವೇ? ಈ ಏರು ತಗ್ಗುಗಳು ಪ್ರಪಂಚದಲ್ಲಿ ಸಹಜ. ಆದುದರಿಂದ ಅದನ್ನು ಅರಿತು ಒಗ್ಗಿಕೊಳ್ಳುವುದೇ ಜಾಣತನ ಎಂದಿದ್ದಾರೆ.

ಒಬ್ಬ ವ್ಯಕ್ತಿಯ ವ್ಯಕ್ತಿತ್ವ ಆ ಮನುಷ್ಯನ ಗುಣ–ಅವಗುಣಗಳ ಪ್ರಮಾಣದ ಮೇಲೆ ನಿರ್ಧಾರವಾಗುತ್ತದೆ. ಕೆಲವರಿಗೆ ತಮ್ಮಲ್ಲಿರುವ ಅವಗುಣಗಳು ತಿಳಿದೇ ಇರುವುದಿಲ್ಲ. ಕೆಲವರು ತಿಳಿದರೂ ಮೊಂಡರಾಗಿ ತಿದ್ದಿಕೊಳ್ಳುವುದಿಲ್ಲ. ಇಟ್ಟ ಹೆಜ್ಜೆ ಹಿಂತಿರುಗಿಸುವುದಿಲ್ಲ ಎನ್ನುವ ಮನೋಭಾವ. ಆ ಸಾಲಿಗೆ ಸೇರಿದವರು ರಾವಣ–ದುರ್ಯೋಧನರು "ಛಲದೊಳ್ ದುರ್ಯೋಧನಂ" ಎಂದಿದ್ದಾನೆ ಆದಿಕವಿ ಪಂಪ.

ಅವನು ಒಳ್ಳೆಯವ, ಇವನು ಕೆಟ್ಟವ ಎಂದು ನಾವು ಹೇಳುವುದು ಸರಿಯೇ? ಎಂಬ ಪ್ರಶ್ನೆ ಬರಬಹುದು. ಪ್ರತಿಯೊಬ್ಬ ಜೀವಿಯೂ ಜನನ–ಮರಣಗಳ ನಡುವೆ ಬದುಕನ್ನು ಸಾಗಿಸುವಾಗ ಪೂರ್ವ ಸಂಚಿತ ಪುಣ್ಯ–ಪಾಪಗಳಿಗನುಗುಣವಾಗಿಯೇ ಸುಖ–ದುಃಖಗಳನ್ನು ಅನುಭವಿಸುತ್ತಾನೆ. ನಾವು ಪಡೆದಿರುವುದೆಷ್ಟೋ? ಕಳೆದಿರುವುದೆಷ್ಟು? ಎಂದು ತಿಳಿಯಲು ಅದು ಬುದ್ಧಿಗೆ ಎಟುಕದ ವಿಷಯ. ಅದು ಅಗೋಚರ. ಈ ಗಹನ ವಿಚಾರ ಪರಮಾತ್ಮನಿಗೆ ಮಾತ್ರ ತಿಳಿದಿದೆ ಆದುದರಿಂದ ಪ್ರತಿಯೊಬ್ಬರ ಬಾಳಿನ ಸರಿ–ತಪ್ಪುಗಳ ಲೆಕ್ಕಾಚಾರದಲ್ಲಿ ಸರ್ವಜ್ಞನಾಗಿರುವ ಆ ಭಗವಂತನಿಗೇ ಬಿಡುವುದು ಲೇಸು.

ಆದುದರಿಂದ ರಾಮನಿದ್ದಾಗಲೇ ಅಧರ್ಮಿ ರಾವಣನೂ ಇದ್ದ. ದುಷ್ಟ ಶಿಕ್ಷಣ ಸಜ್ಜನ ಸಂರಕ್ಷಣ ಮಾಡಿದ ಶ್ರೀರಾಮ. ದುಷ್ಟನಾದ ದುಶ್ಶಾಸನನು ಅಣ್ಣನ ಆಜ್ಞೆಯಂತೆ ದ್ರೌಪದಿಯ ಸೀರೆಯನ್ನು ಸೆಳೆದ. ಅದೇ ರೀತಿ ತನ್ನ ಹೆಂಡತಿಯು ಮಾನಭಂಗವಾದಾಗಲೂ ಭೀಮ ಅಣ್ಣನ ಮನೋಭಾವಕ್ಕೆ ಸಮ್ಮತಿಸಿದ. ರಕ್ತ ಕುದಿಯುತ್ತಿದ್ದರೂ ಅಣ್ಣನ ಧರ್ಮಪಾಲನೆಗೆ ತಲೆ ಒಡ್ಡಿದ. "ಹುಬ್ಬಿನಲಿ ನಿಲ್ಲಿಸಿದನು ಪವನಜನ ಉಬ್ಬಟೆಯನು ಧರ್ಮರಹಸ್ಯ ನಿಷ್ಠೆಯಲಿ" ಎಂದಿದ್ದಾನೆ ಕುಮಾರವ್ಯಾಸ. ಯುಧಿಷ್ಠಿರನ ಹುಬ್ಬಿನ ಸನ್ನೆಯಲಿ ತನ್ನೆಲ್ಲಾ ರೋಷಗಳನ್ನೂ ತಡೆ ಹಿಡಿದಿದ್ದ ಭೀಮ. ಹೀಗೆ ಎಷ್ಟೋ ಅನ್ಯಾಯಗಳು ನಡೆಯುತ್ತವೆ. ಆದುದರಿಂದ ನಾವು ಮೊದಲು ಸರಿಯೇ ಎಂದು ನಮ್ಮನ್ನು ನಾವು ಅವಲೋಕನ ಮಾಡಿಕೊಂಡು ವಿವೇಕದಿಂದ ವರ್ತಿಸಿ ಯಾರ ಬಗ್ಗೆಯೂ ಯಾವುದನ್ನೂ ಪ್ರಶ್ನಿಸದೆ ಯಾವ ಅಭಿಪ್ರಾಯವನ್ನು ಪಡೆಯದೆ. ಶ್ರೀರಾಮನ ಭಂಟರಾಗೋಣ. ಅಂದರೆ ಧರ್ಮ ವಿರುದ್ಧವಾದವರೊಡನೆ ಹೋರಾಡಿ ಜಯಗಳಿಸೋಣ.

◆ ಜೆ.ಪಿ. ಲಕ್ಷ್ಮೀದೇವಿ
23444798



# ನಂಬಿಕೆ

ಇದೊಂದು ದೊಡ್ಡಪ್ರಶ್ನೆ ಬಾಳಿನಲ್ಲಿ ಎಲ್ಲರ ಪಾಲಿಗೆ? ಜೀವನದ ಕಟ್ಟಕಡೆಯ ತನಕ ಕಾಡುವ ಪ್ರಶ್ನೆ. ನಿರಂತರ ಬದಲಾವಣೆ ಪ್ರಕೃತಿ ನಿಯಮ. ಹಾಗೆ ಸಂಸಾರದ ಪರಿವಾರ, ಸುತ್ತಲಿನ ಸಮಾಜ, ಬಂಧುಗಳು, ಸ್ನೇಹಿತರು ಇತ್ಯಾದಿ. ಮಾನವ ಬಾಲ್ಯದಿಂದ ತಂದೆ, ತಾಯಿ, ಅಣ್ಣ, ತಮ್ಮ, ಅಕ್ಕ, ತಂಗಿ ಹಾಗೆ ಗಂಡ, ಹೆಂಡತಿ ಮಕ್ಕಳು ಬಂಧು-ಬಳಗ ಎಲ್ಲರೂ ನಂಬಿಕೆಗೆ ಅರ್ಹರೆ? ಹಾಗೆಂದು ನಂಬಿ ಜೀವನ ಸಾಗುತ್ತಿರುತ್ತದೆ. ಬೆಳವಣಿಗೆ ಆದ ಹಾಗೆ ಅಹಂ ಮತ್ತು ಸ್ವಾರ್ಥ ಎದ್ದು ನಿಂತಾಗ ಬುದ್ಧಿಯ ಮಾರ್ಪಾಡಾಗಿ ದೃಷ್ಟಿಕೋಣ ಬದಲಾಗಿ ವ್ಯಕ್ತಿತ್ವ ವ್ಯತ್ಯಾಸವಾಗುತ್ತದೆ. ತನು, ಮನ, ಧನದಿಂದ ನೆಂಟರು ಅಷ್ಟೆ. ಮೂರೂ ತೀರಿದ ಮೇಲೆ ಎಲ್ಲಾ ದೂರವಾಗುತ್ತಾರೆ.

ರಾಜಕೀಯದಲ್ಲಿ ದಿನನಿತ್ಯವೂ ಪಕ್ಷಾಂತರ ಆಗುತ್ತಲೇ ಇರುತ್ತದೆ. ಯಾರೂ ಧ್ಯೇಯಕ್ಕಾಗಿ ಇರುವುದಿಲ್ಲ. ತಮ್ಮ ಸ್ಥಾನ ಭದ್ರತೆಗೆ ಬೇಕಾದ ಹಾಗೆ ಸದಾ ನುಣುಚಿ ಕೊಳ್ಳುವುದು ಕಾಣುತ್ತದೆ. ಇವರೆಲ್ಲಾ ನಂಬಿ ಪಕ್ಷ ಕಟ್ಟಿದವರು. ಈಗ ಆ ನಂಬಿಕೆಯೆಲ್ಲಿ?

ಹಣ ಹೂಡುವಿಕೆ ವಿಚಾರದಲ್ಲಿ ಕೋಟ್ಯಾಂತರ ರೂಪಾಯಿಗಳು ನುಂಗಿ ಮೋಸ ಮಾಡುವವರಿದ್ದಾರೆ. ಇದು ನಂಬಿ ಮಾಡಿದ್ದು. ಅದು ನಿರಂತರ ನಡೆಯುತ್ತಲೇ ಇದೆ. ಎಲ್ಲಿಯ ವರೆಗೆ ನಂಬುವವರಿದ್ದಾರೆಯೋ ಅಲ್ಲಿವರೆಗೂ ಮೋಸ ಮಾಡುತ್ತಲೇ ಇರುತ್ತಾರೆ. ಆಧುನಿಕ ಕಾಲದ ತಂತ್ರಜ್ಞಾನ ವಿಪರೀತ ಮುಂದುವರಿದಿದೆ. ಕೂತಲ್ಲೇ ಲಕ್ಷಾಂತರ ರೂಪಾಯಿ ನಷ್ಟವಾಗುವುದು. ಅತಿಮುಖ್ಯ ಸಮಾಚಾರ ಪತ್ರಿಕೆ, ಟಿ.ವಿ.ಯಲ್ಲಿ "ಅಂತರಿಕ್ಷದಿಂದ ಖಾತೆಗೆ ತನ್ನ ಪತ್ನಿಯಿಂದ" ಪಾತಾಳದ ನಿಧಿ ಎಂದು ತಂತ್ರಜ್ಞರಿಂದ ಮೋಸ.

ಬೃಂದಾವನದಿ ತಳದಿ ನಿಧಿ ಎಂದು ಕಳ್ಳರ ಕನ್ನ. ಸುಳ್ಳು ವಂಚನೆಯಿಂದ ಸರ ಅಪಹರಣ. ಮೊಬೈಲ್‌ನಲ್ಲಿ ಮೋಸದಿ ಹಣ ಅಪಹರಣ, ಬ್ಯಾಂಕುಗಳ ದರೋಡೆ. ದೇವರ ಹೆಸರಿನಲ್ಲಿ ಮೋಸ ಜಾಸ್ತಿ ಪತ್ರಿಕೆಯಲ್ಲಿ ದೊಡ್ಡ ಪಟ್ಟಿ. ನಮ್ಮನ್ನು ನಂಬಿದರೆ. ಪ್ರೇಮ ವೈಫಲ್ಯ. ವ್ಯಾಪಾರದಿ ವೃದ್ಧಿ, ಮಕ್ಕಳ ಪ್ರಾಪ್ತಿ, ದಾಂಪತ್ಯ ಸಮಸ್ಯೆ ಪರಿಹಾರ. ವಿದೇಶಕ್ಕೆ ಪ್ರಯಾಣ. ವ್ಯಾಜ್ಯ ಪರಿಹಾರ. ಧನಪ್ರಾಪ್ತಿ, ಸಂಸಾರ ನೆಮ್ಮದಿ, ರೋಗನಿರ್ಮೂಲ, ಯಾವ ಕಷ್ಟ-ನಷ್ಟ ಇದ್ದರೂ ಶೀಘ್ರ ಪರಿಹಾರ ನಮ್ಮಲ್ಲಿ ಇದೆ ಕೂಡಲೇ ಓಡಿ ಬನ್ನಿ. ಸಂತೋಷದ ಬಾಳು ನಿಮ್ಮದಾಗುವುದು. ನಮ್ಮನ್ನು ನಂಬಿ.

ದುರ್ಗಾರಾಧಕರು. ಜ್ಯೋತಿಷ್ಯಶಾಸ್ತ್ರಬಲ್ಲ ಪಂಡಿತರು. ಭವಿಷ್ಯ ಹೇಳುವರು. ಮಾಟ, ಮಂತ್ರ ಮಾಡುವರು 64 ದಶ ಮಹಾವಿದ್ಯೆ ವಿದ್ವಾಂಸರು. ಇವರೆಲ್ಲರ ವಿಳಾಸ. ಪರಿಹಾರ ಪಡೆದವರ ವಿವರ ಎಲ್ಲಾ ನಂಬಿ ಬನ್ನಿ ಬಳಿಗೆ. ಶೀಘ್ರದಿ ಕೂದಲ ಬೆಳವಣಿಗೆ ಮೊಡವೆ ನಿವಾರಣೆ, ಸೌಂದರ್ಯ ವೃದ್ಧಿ, ಬೋಳುತಲೆಗೆ ಕೇಶರಾಶಿ-ಚರ್ಮದ ಸೌಂದರ್ಯ. ಎಲ್ಲರೂ ಸುಂದರವಾಗಿ ಕಾಣಲು. ಮುದುಕಿಯರಿಗೆ ಮತ್ತೆ ಮರಳಿ ಯೌವ್ವನ, ಕೊಬ್ಬು ನಿವಾರಣೆ, ಸಣ್ಣವಿದ್ದರೆ ದಪ್ಪ, ಆಗುವುದು. ವ್ಯಕ್ತಿತ್ವ ವಿಕಸನ ಎಲ್ಲವೂ ಒಂದೇ ಕಡೆ ಲಭ್ಯ. ಶೀಘ್ರದಿ ಶಮನ. ನಂಬಿದ ಮಂದಿ ಬಹಳ ಜನರಿದ್ದಾರೆ. ನೀವು ಬಂದು ಲಾಭ ಪಡೆಯಿರಿ.

ಆದರೆ ಸಾಮಾನ್ಯವಾಗಿ ಆತ್ಮೀಯತೆ, ಸ್ನೇಹ, ಮಮತೆ, ಗೌರವ ಈ ಪದಗಳೆಲ್ಲಾ ಬಾಲ್ಯ, ಯೌವ್ವನದಿ ಸಹಜ ಗುಣವಾಗಿರುತ್ತೆ ವಯಸ್ಸಾದ ನಂತರ ಬುದ್ಧಿ ಜಾಸ್ತಿಯಾಗಿ ಸ್ವಾರ್ಥ ಸಾಧನೆಗೆ, ತಮ್ಮ ಅಸ್ತಿತ್ವಕ್ಕೆ ಧಕ್ಕೆ ಬರದ ಹಾಗೆ ಜೀವನ ರೂಪಗೊಳ್ಳುತ್ತದೆ. ಇದು ಸತ್ಯ. ನಂಬಲು ಧೈರ್ಯ ಬೇಕು. ಆಗ ಜೀವನ ನಾಟಕ. ಕೃತಕನಗು. ವ್ಯವಹಾರಿಕ ಮಾತು ಸಮಾರಂಭಗಳಲ್ಲಿ ಸಿಕ್ಕರೆ ಯಾರಿಗೂ ಯಾರು ಬೇಕಾಗಿಲ್ಲ. ಯಾಕೆಂದರೆ ಹೆಚ್ಚಿನ ಸಮಾಚಾರ ಜ್ಞಾನ ಎಲ್ಲಾ ಅಂಗೈಯಲ್ಲಿ ಇರುತ್ತದೆ. ಕಾಲ ಬದಲಾಗಿಲ್ಲ ಮೌಲ್ಯಗಳು ಬದಲಾಗಿದೆ. ಇದಿಷ್ಟು ಪ್ರಪಂಚದ ಸ್ಥೂಲ ವಿಚಾರಕ್ಕೆ ಸಂಬಂಧ ಅಷ್ಟೆ. ಜ್ಞಾನಿಗಳ ಸಿದ್ಧಿ ವಾಕ್ಯ ಬೇರೆ. "ನಂಬಿ ಕೆಟ್ಟವರಿಲ್ಲ ರಂಗಯ್ಯನ ನಂಬದೆ ಕೆಟ್ಟರೆ" "ಉಂಟಾದ ಕಾಲಕ್ಕೆ ನೆಂಟರು ಇಷ್ಟರು" ದಾಸರಪದದಿ ಅಭಯ ಉಂಟು. ನಂಬು ಹರಿಯ ಮನವೆ ನೆರೆನಂಬು ಹರಿಯಮನವೆ" ಮಹೀಪತಿದಾಸರ ಆತ್ಮೀಯ ಪದ.

ಪೂಜ್ಯ ಡಾ. ಡಿ.ವಿ.ಜಿ. ಯವರು ನಂಬಿಕೆ ಬಗ್ಗೆ ಹೇಳಿದ ಅಮೂಲ್ಯ ಕಗ್ಗದ ಪದ್ಯ.

**ನಂಬದಿದ್ದನು ತಂದೆ ನಂಬಿದನು ಪ್ರಹ್ಲಾದ।**
**ನಂಬಿಯೂ ನಂಬದಿರುವಿಬ್ಬಂದಿ ನೀನು ॥**
**ಕಂಬದಿನೋ ಬಿಂಬದಿನೋ ಮೋಕ್ಷವ ಪರಿಂಗಾಯ್ತು**
**ಸಿಂಬಳದಿ ನೊಣ ನೀನು – ಮಂಕುತಿಮ್ಮ**

**ಭಕ್ತಿ ನಂಬುಗೆ ಸುಲಭ ಭಜನೆವಂದನೆ ಸುಲಭ**
**ತತ್ತ್ವ ಶೋಧನೆ ಕಷ್ಟ ಮತಿಕಾರ್ಯಕಷ್ಟ.**
**ಸುತ್ತುವುದು ಗಿರಿಸುತ್ತ ಸುಳುವೆಂದು ಲೋಕ ಜನ**
**ಹೆತ್ತುವನು ತಾಪಸಿಯೋ –ಮಂಕುತಿಮ್ಮ**



◆ ಭ್ರಮರಾ ಗೋಪಿನಾಥ್
26677574

# ಸಂಘದ ಕಾರ್ಯಕಾರಿ ಸಮಿತಿಯ 'ಸ್ನೇಹ ಸಂಜೆ'








ಸಂಘದ ಅಧ್ಯಕ್ಷ ಶ್ರೀ ಎಸ್. ಸೋಮಸುಂದರ ಹಾಗೂ ಕಾರ್ಯದರ್ಶಿ ಶ್ರೀ ವಿ.ಎಸ್. ಮಣಿ ಅವರು ಸಂಘಕ್ಕೆ ನೀಡಿರುವ ಸೇವೆಯನ್ನು ಸ್ಮರಿಸಿ ಕಾರ್ಯಕಾರಿ ಸಮಿತಿಯು ದಿನಾಂಕ : 17–08–2019ರಂದು ಜಯನಗರದ 'ಪೈ ವೈಸರಾಯ್' ಹೋಟೆಲ್‌ನಲ್ಲಿ 'ಸ್ನೇಹ ಸಂಜೆ' ಸಂತೋಷಕೂಟವೊಂದನ್ನು ಏರ್ಪಡಿಸಿದ್ದ ಸಂದರ್ಭದ ಚಿತ್ರಗಳು



ಸುದ್ದಿಮನೆ

# 'ಅಚಲಾ' ಒಂದು ನೆನಪು

**ವ**ಸುದೈವ ಕುಟುಂಬಕಂ 'ವಸುಧಾ' (ಭೂಮಿ) + ಇವಾ (ಒಂದೇ ಮತ್ತು ಒಂದೇ) + ಕುಟುಂಬಕಂ (ಕುಟುಂಬ).

ಹಿಂದೂ ಧರ್ಮದ ಸಾಟಿಯಿಲ್ಲದ ಸೈದ್ಧಾಂತಿಕ ನಿಲುವಿನ ಪ್ರತಿನಿಧಿಯಾಗಿರುವ ಉನ್ನತ ಪರಿಕಲ್ಪನೆಗಳಲ್ಲಿ ವಸುದೈವ ಕುಟುಂಬಕಂ ಒಂದು. ಅಕ್ಷರಶಃ ಅರ್ಥ "ಇಡೀ ಜಗತ್ತು ಒಂದೇ ಕುಟುಂಬ", ಈ ಹೇಳಿಕೆಯು ಜಾತಿ, ಬಣ್ಣ, ಜನಾಂಗೀಯತೆ, ರಾಷ್ಟ್ರೀಯತೆ ಮತ್ತು ಧರ್ಮದ ವ್ಯತ್ಯಾಸ ಗಳನ್ನು ತ್ಯಜಿಸುವ ಸಹೋದರತ್ವದ ಅತ್ಯುನ್ನತ ಪ್ರಜ್ಞೆಯನ್ನು ಪ್ರದರ್ಶಿಸಲು ಮಾನವರಿಗೆ ಆದೇಶಿಸುತ್ತದೆ.

**ಅಚಲಾ ರಮೇಶ್** 2011ರಲ್ಲಿ ಪ್ರಕಟವಾದ 'ಬೃಹಚ್ಚರಣ ಪತ್ರಿಕೆ'ಯ ಮೊದಲ ಸಂಪಾದಕ ಮಂಡಳಿಯಲ್ಲಿದ್ದ ಸದಸ್ಯೆ. ತದನಂತರ ಇವಳು ಬೃಹಚರಣ ಪತ್ರಿಕೆಗಾಗಿ ಬರೆದ ಡಾ॥ ಡಿ.ವಿ.ಜಿ.ಯವರ ವಿಚಾರಧಾರೆಯಾಗಲಿ, ಬೃಹಚ್ಚರಣ ಭಾಷೆ ನಡೆದು ಬಂದ ಹಾದಿಯ ಹೊಸ ಶೈಲಿಯ ಬರವಣಿಗೆ ಮನಸ್ಸಿನಲ್ಲಿ ಉಳಿಯುವಂಥದ್ದು.

ಬೃಹಚ್ಚರಣ ಸಮುದಾಯದವರೆಲ್ಲರೂ ಇವಳ ವಿಸ್ತೃತ ಕುಟುಂಬದವರಾಗಿದ್ದು ಇವರೆಲ್ಲರನ್ನು ಒಂದೇ ವೇದಿಕೆ/ ಪರಿಸರ / ಬೆಸುಗೆ ಹಾಕುವ ಪರಿಕಲ್ಪನೆಯಲ್ಲೇ "ಬೃಹಚ್ಚರಣ ಫೇಸ್ಬುಕ್ ಪುಟವನ್ನು" ರಚಿಸಿದ್ದು ಇವಳೆ. ಇಂತಹ ವ್ಯಕ್ತಿತ್ವ ನಮ್ಮನ್ನಗಲಿ ಈಗಾಗಲೇ 6 ವರ್ಷಗಳಾಗಿವೆ.

ಶ್ರೀಮತಿ ಮತ್ತು ಶ್ರೀ ರಮೇಶ್ ಕುಟುಂಬ, ಬೆಂಗಳೂರಿನ ದಿ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಂಸ್ಥೆಯ ಸಹಯೋಗದಲ್ಲಿ **ಕುಮಾರಿ ಅಚಲಾ ರಮೇಶ್ ಸ್ಮರಣಾರ್ಥ ದತ್ತಿ** ಕಾರ್ಯಕ್ರಮವನ್ನು ಪ್ರತಿ ವರ್ಷದಂತೆ ಈ ವರ್ಷವೂ ಸೆಪ್ಟೆಂಬರ್ 19ರಂದು ಹಮ್ಮಿಕೊಂಡಿತ್ತು. ಈ ಹಿಂದಿನ ವರ್ಷಗಳಲ್ಲಿ ಸತ್ಸಂಗ, ವ್ಯಾಖ್ಯಾನ, ನೃತ್ಯ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿದ್ದು, ಕರ್ನಾಟಕ ಶಾಸ್ತ್ರೀಯ ಸಂಗೀತ ಸಂಜೆ ಈ ವರ್ಷದ ಕಾರ್ಯಕ್ರಮ ವಾಗಿತ್ತು. ಸಭೆಯಲ್ಲಿದ್ದ ಹಿರಿಯರಿಂದ ದೀಪ ಬೆಳಗಿಸುವ ಮೂಲಕ ಉದ್ಘಾಟನೆಗೊಂಡು, ಅಚಲಾಳ ಬಗ್ಗೆ ಒಂದು ಸಣ್ಣ ಪರಿಚಯದ ನಂತರ, ಚಿ॥ ಅರ್ಜುನ್ ದೇಶಪಾಂಡೆಯ ಸುಶ್ರಾವ್ಯ ಸಂಗೀತ, ವಿದ್ವಾನ್ ಕೆ.ಸಿ. ಜಯರಾಂರವರಿಂದ ಪಿಟೀಲು ಹಾಗೂ ವಿದ್ವಾನ್ ಸುಧೀಂದ್ರರವರಿಂದ ಮೃದಂಗ ವಾದನ ಏರ್ಪಾಡಾಗಿತ್ತು. ಸಮಾರಂಭದಲ್ಲಿ ಬೃಹಚ್ಚರಣ ಸಮುದಾಯದ ಸ್ನೇಹಿತರು, ಸಂಬಂಧಿಗಳು ಪಾಲ್ಗೊಂಡಿದ್ದು ವಿಶೇಷ.



ಕಾರ್ಯಕ್ರಮ ಮುಕ್ತಾಯದ ನಂತರ ತೆಗೆಸಿದ ಗ್ರೂಪ್ ಫೋಟೋ ಆ ಸಂಜೆಯ ಹೈಲೈಟ್. ಆ ಚಿತ್ರದಲ್ಲಿ ಅಚಲಾಳ ಸಂಬಂಧಿಕರು, ಸ್ನೇಹಿತರು, ಹಿತೈಷಿಗಳು, ಅವಳನ್ನು ಆಶೀರ್ವದಿಸಿದವರು, ಅವಳೊಡನೆ ಆಟವಾಡಿ ದವರು, ಗುರುಗಳೂ, ಅವಳು ಅತ್ಯಂತ ಪ್ರೀತಿಸುತ್ತಿದ್ದ ಸಂಗೀತ ಉಪಾಸಕರೂ ಹಾಗೂ ಅವಳನ್ನೂ ಒಮ್ಮೆಯೂ ನೋಡದಿದ್ದರೂ ಅಚಲಾ ಯಾರೆಂದು ಗೊತ್ತಿರುವ ಚಿಣ್ಣರು ಇರುವುದು **ವಸುದೈವ ಕುಟುಂಬಕಂ** "ಇಡೀ ಜಗತ್ತು ಒಂದೇ ಕುಟುಂಬ" ಎಂಬ ವಾಕ್ಯಕ್ಕೆ ಅನ್ವರ್ಥನಾಮದಂತಿತ್ತು.

◆ **ಎನ್. ಶಿವಕುಮಾರ್**
26720144







# ವಾರ್ತಾ ಚಿತ್ರಗಳು







ಸಂಘದ ಸದಸ್ಯ ತಾಳವಾದ್ಯ ವಿದ್ವಾನ್ ಶ್ರೀ ಪ್ರಶಾಂತ್‌ರವರು
ಪಾಲ್ಗೊಂಡಿದ್ದ ವಿವಿಧ ಸಂಗೀತ ಕಾರ್ಯಕ್ರಮಗಳು





ಸಂಘದ ಸದಸ್ಯ ತಾಳವಾದ್ಯ ವಿದ್ವಾನ್ ಶ್ರೀ ಕಾರ್ತಿಕ್‌ರವರು
ಪಾಲ್ಗೊಂಡಿದ್ದ ವಿವಿಧ ಸಂಗೀತ ಕಾರ್ಯಕ್ರಮಗಳು




ಮಾ॥ ಅಭಯ್ (ಶ್ರೀಮತಿ ಮೇಘನಾ ಹಾಗೂ ಶ್ರೀ ಸುಮಂತ್‌ರವರ ಪುತ್ರ)
‘ಶಂಕರ್ ಮಹಾದೇವನ್ ಅಕಾಡೆಮಿ’ಯಲ್ಲಿ
ನೀಡಿದ ಸಂಗೀತ ಪ್ರದರ್ಶನಕ್ಕೆ ಪ್ರಶಂಸಾ ಪತ್ರ ಪಡೆದರು



ಚಲನಚಿತ್ರರಂಗದ ದಿಗ್ಗಜ ಶ್ರೀ ಎಸ್. ಶಿವರಾಂರವರು,
ಶ್ರೀಮತಿ ಪಲ್ಲವಿ ಗುರುಪ್ರಸನ್ನ ರಚಿಸಿರುವ ‘ಚಿತ್ತಾರದ–ವಿಸ್ತಾರ’
ಪುಸ್ತಕ ಬಿಡುಗಡೆ ಸಮಾರಂಭ (25–8–2019)



ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ
‘ಕುಮಾರಿ ಅಚಲಾ ಸ್ಮರಣಾರ್ಥ’ ದತ್ತಿ ಸಂಗೀತ ಕಾರ್ಯಕ್ರಮದಲ್ಲಿ
ಮಾ॥ ಅರ್ಜುನ್ ದೇಶಪಾಂಡೆ (19–9–2019)

# ವಾರ್ತಾ ಚಿತ್ರಗಳು



ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಟಿ.ಎಸ್. ರಮೇಶನ್‌ರವರ ಮೊಮ್ಮಗ ಹಾಗೂ ಸಂಘದ ಸದಸ್ಯ ಶ್ರೀ ಜಿ.ಎ. ಚಂದ್ರಶೇಖರ್‌ರವರ ಪುತ್ರ ಚಿ॥ ಜಿ.ಸಿ. ಶ್ರೀರಾಮ್ ಬಿಡಿಸಿರುವ ಚಿತ್ರ



ಸಂಘದ ಸದಸ್ಯ ಶ್ರೀ ದಿಲೀಪ್ ಕುಮಾರ್‌ರವರ ಮೊಮ್ಮಗ ಚಿ॥ ಸಮರ್ಥ ಬಿಡಿಸಿರುವ ಚಿತ್ರ



ಅಚಲಾ ಸ್ಮರಣಾರ್ಥ ನಡೆದ ಕಾರ್ಯಕ್ರಮದಲ್ಲಿ ನಮ್ಮವರು (19–9–2019)

| | |
|---|---|
| *If undelivered please return to :*<br>*President*<br>**'Bruhacharana Sangha'**<br>No. 27/1, Bull Temple Road,<br>Basavanagudi,<br>Bengaluru - 560 004. | To,<br><br>Book-Post |

Published by Sri B. Subramanyam, President, 'BRUHACHARANA SANGHA' No. 27/1, Bull Temple Road, Basavanagudi, Bengaluru - 560 004.
Printed at Keerthi Printers, Omkara, 240-F, 2nd D Cross, 2nd 'B' Main, Girinagar 1st Phase, Bengaluru - 560 085, Ph : 080-26722034